ಅಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೇ, ನೀವು ನೋಟಿಸ್ ಕಳುಹಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ರೂಲ್ 69ಕ್ಕೆ ಒಂದು ನೋಟಿಸ್ ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್: ರೂಲ್ 69ರ ಬಗ್ಗೆ ನೀವು ಚರ್ಚೆ ಆರಂಭ ಮಾಡಿ. ಇದಾದ ನಂತರ ಕೊಡುತ್ತಾರೆ ನೀವೇ ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ನೋಟಿಸ್ ಕೊಡದಿದ್ದರೆ, ಅಧ್ಯಕ್ಷರು ರೂಲ್ 69ಕ್ಕೆ ಕನ್ವರ್ಟ್ ಮಾಡಲಿಕ್ಕೆ ಬರುವುದಿಲ್ಲ.

ವಿಷಯ: ಸಹಾಯಕಿಯರನ್ನು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ಗೊಂದಲ ಸ್ಪಷ್ಟಯಾಗಿರುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಸಹಾಯಕಿಯರನ್ನು ಮತ್ತು ಕಾರ್ಯಕರ್ತೆಯರನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ಏನು ಗೊಂದಲ ಸೃಷ್ಟಿಯಾಗಿದೆ, ಆ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ ಪ್ರಕಾಶ್ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ನಾನು ಈ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

ರಾಜ್ಯದಲ್ಲಿ 40,301 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ, 11,313 ಅಂಗನವಾಡಿ ಕೇಂದ್ರಗಳನ್ನು ಹೆಚ್ಚುವರಿಯಾಗಿ ಪ್ರಾರಂಭಿಸಲು 2005–06ನೇ ಸಾಲಿನ ಅಂತ್ಯದಲ್ಲಿ ಕೇಂದ್ರ ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಈ ಹೊಸದಾಗಿ ಮಂಜೂರಾದ 11,313 ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಈ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರನ್ನು ಗುರುತಿಸುವ ಪ್ರಕ್ರಿಯೆ ರಾಜ್ಯದ ಎಲ್ಲಾ 27 ಜಿಲ್ಲೆಗಳಲ್ಲಿ ನಡೆದಿರುತ್ತದೆ.

ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು ಗುರುತಿಸಲು ಪ್ರತಿ ತಾಲ್ಲೂಕಿನಲ್ಲಿ ಒಂದು ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯಿರುತ್ತದೆ. ಈ ಸಮಿತಿ ಅಧ್ಯಕ್ಷರಾಗಿ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾ ಅಧಿಕಾರಿಗಳು ಇರುತ್ತಾರೆ. ಉಪಾಧ್ಯಕ್ಷರಾಗಿ ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿರುತ್ತಾರೆ.

ಸ್ಥಳೀಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಶಾಸಕರು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಜಿಲ್ಲಾ ಪಂಚಾಯತ್‌ನಿಂದ ನಾಮ ನಿರ್ದೇಶಿತ ಸದಸ್ಯರು ಸದಸ್ಯರಿರುತ್ತಾರೆ. ಈ ಆಯ್ಕೆ ಸಮಿತಿ ಒಮ್ಮತದಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಿರುತ್ತಾರೆ.

ಅಂಗನವಾಡಿ ಕಾರ್ಯಕರ್ತೆಯನ್ನು ಆಯ್ಕೆ ಮಾಡಲು ಇರಬೇಕಾದ ಅರ್ಹತೆಗಳು:

1. ಅಭ್ಯರ್ಥಿಯು ಸ್ಥಳೀಯ ಮಹಿಳೆಯಾಗಿರಬೇಕು
2. 18 ರಿಂದ 45 ವರ್ಷದೊಳಗಿನವರಾಗಿರಬೇಕು.
3. ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕು
4. ಅರ್ಹತೆಯ ಮೇರೆಗೆ ಬುದ್ದಿವಂತಿಕೆಯುಳ್ಳ ಚಟುವಟಿಕೆಯುಳ್ಳ ಮಹಿಳೆಯರನ್ನು ಅಂಗನವಾಡಿ ಕಾರ್ಯಕರ್ತೆಯಾಗಿ ಗುರುತಿಸಲಾಗುವುದು.

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿಧವೆ, ಅಂಗವಿಕಲರು ಹಾಗೂ ಪರಿತ್ಯಕ್ತೆಯರಿಗೆ ಆದ್ಯತೆ ನೀಡಲು ಸೂಚಿಸಲಾಗಿದೆ.

ಅಂಗನವಾಡಿ ಸಹಾಯಕಿಯರನ್ನು ನೇಮಕ ಮಾಡುವಾಗ ಗ್ರಾಮದ 18 ವರ್ಷಕ್ಕೆ ಮೇಲ್ಪಟ್ಟ ಸ್ಥಳೀಯ ಮಹಿಳೆ 4ನೇ ತರಗತಿ ತೇರ್ಗಡೆಯಾಗಿರುವ ಗ್ರಾಮಸ್ಥರಿಂದ ಒಪ್ಪಿಗೆ ಪಡೆದ ಮಹಿಳೆಯರನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಜಿಲ್ಲಾ ನಿರ್ದೇಶಕರ ಅನುಮೋದನೆ ಮೇರೆಗೆ ಗುರುತಿಸುವರು.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 40,301 ಅಂಗನವಾಡಿ ಕೇಂದ್ರಗಳ ಜೊತೆಗೆ ಶಿಕ್ಷಣಾ ಇಲಾಖಾ ವತಿಯ ಸರ್ವ ಶಿಕ್ಷಣ ಅಭಿಯಾನ ಕೇಂದ್ರದ ವತಿಯಿಂದ 3 ರಿಂದ 6 ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡಲು 2,844 ಶಾಲಾ ಪೂರ್ವ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 2005–06ನೇ ಸಾಲಿನ ಅಂತ್ಯದಲ್ಲಿ ರಾಜ್ಯದಲ್ಲಿ ಮಂಜೂರಾದ 11,313 ಅಂಗನವಾಡಿ ಕೇಂದ್ರಗಳಲ್ಲಿ 2,844 ಶಾಲಾ ಪೂರ್ವ ಕೇಂದ್ರಗಳನ್ನು ಅಂಗನವಾಡಿ ಕೇಂದ್ರಗಳಾಗಿ ಪರಿವರ್ತಿಸಲಾಗಿದೆ. ಹಾಗೂ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶಿಕ್ಷಕಿಯರನ್ನು ಅಂಗನವಾಡಿ ಕಾರ್ಯಕರ್ತೆಯರಾಗಿ ನೇಮಿಸಲು ಕ್ರಮ ವಹಿಸಲಾಗಿದೆ. ಉಳಿ ಅಂಗನವಾಡಿ ಕೇಂದ್ರಗಳಿಗೆ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಮೂಲಕ ಅಂಗನವಾಡಿ ಕಾರ್ಯಕರ್ತೆಯರನ್ನು ಹಾಗೂ ಸಹಾಯಕಿಯರನ್ನು ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ.

11,313 ಹೊಸ ಅಂಗನವಾಡಿ ಕೇಂದ್ರಗಳು ಮಂಜೂರಾದಾಗ ಸ್ವಂತ ಊರುಗಳನ್ನು ಬಿಟ್ಟು ಬೇರೆಡೆ ವಾಸಿಸುತ್ತಿರುವ ಹಲವಾರು ವರ್ಷ ಸೇವೆ ಸಲ್ಲಿಸಿರುವ 500ಕ್ಕಿಂತ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಸ್ವಂತ ಜಾಗಕ್ಕೆ ಸ್ಥಾನಪಲ್ಲಟ ಕೋರಿ ಮನವಿಗಳನ್ನು ಪ್ರಧಾನ ಕಛೇರಿಗೆ ಸಲ್ಲಿಸಿರುತ್ತಾರೆ. ದಿನಾಂಕ 27.8.2004ರ ನಿರ್ದೇಶಾನಲಯದ ಸುತ್ತೋಲೆಯಂತೆ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಮನವಿಗಳಲ್ಲಿ ನಿರ್ದಿಷ್ಟವಾದ ಕಾರಣಗಳಿದ್ದು, ಅಂತಹ ಪ್ರಕರಣಗಳಿದ್ದರೆ ಅವುಗಳಿಗೆ ಮೊದಲ ಆದ್ಯತೆ ನೀಡಿ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ತಿಳಿಸಲಾಗಿರುತ್ತದೆ. ಈ ಸ್ಥಾನಪಲ್ಲಟಗಳನ್ನು ಆಯ್ಕೆ ಸಮಿತಿಯ ಗಮನಕ್ಕೆ ತಂದು ಸ್ಥಾನಪಲ್ಲಟಕ್ಕೆ ನೇಮಕಕ್ಕಿಂತ ಹೆಚ್ಚು ಆದ್ಯತೆ ನೀಡಲು ಸೂಚಿಸಲಾಗಿರುತ್ತದೆ.

ದಿನಾಂಕ: 10.1.2005ರ ಸರ್ಕಾರ ಹೊರಡಿಸಿದ ಸುತ್ತೋಲೆಯಲ್ಲೂ ಖಾಲಿಯಿರುವ ಹುದ್ದೆಗಳಿಗೆ ಸ್ಥಾನಪಲ್ಲಟದ ಮನವಿಗಳಿಗೆ ಮೊದಲು ಪರಿಗಣಿಸಿ ನಂತರ ನೇಮಕಾತಿಗೆ ಆದ್ಯತೆ ನೀಡಲು ತಿಳಿಸಲಾಗಿರುತ್ತದೆ.

ಈ ಸುತ್ತೋಲೆಗಳನ್ನು ಪ್ರಧಾನ ಕಛೇರಿಯಲ್ಲಿ ಸ್ವೀಕರಿಸಿದ ಸ್ಥಾನಪಲ್ಲಟ ಪ್ರಸ್ತಾವನೆಗೆ ಮೊದಲ ಆದ್ಯತೆ ನೀಡಿ ಸ್ಥಾನಪಲ್ಲಟಗಳನ್ನು ಮಾಡಲಾಗಿರುತ್ತದೆ. ಹೀಗೆ ಮಾಡಿದ ಸ್ಥಾನಪಲ್ಲಟಗಳಿಂದ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಅವಕಾಶ ಕಸಿದುಕೊಳ್ಳಲಾಗಿದೆಯೆಂದು ಶಾಸಕರು ವಿರೋಧ ವ್ಯಕ್ತಪಡಿಸಿದ್ದು ಕೆಲವು ಶಾಸಕರು ಸ್ಥಾನಪಲ್ಲಟವನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದನ್ನು ಗಮನಿಸಿ ದಿನಾಂಕ: 19.6.2006ರ ಸರ್ಕಾರದ ಸುತ್ತೋಲೆಯಲ್ಲಿ ಕಾರ್ಯನಿರ್ವಹಣೆಯಲ್ಲಿ ಪರಿಣಿತಿ ಹೊಂದಿರುವ ಅಂಗನವಾಡಿ ಕಾರ್ಯಕರ್ತೆ ಕೌಟುಂಬಿಕ ಕಾರಣಗಳಿಂದಾಗಿ ತಮ್ಮ ನಿವಾಸಗಳನ್ನು ಬೇರೆಡೆಗೆ ಸ್ಥಳಾಂತರಿಸಿಕೊಂಡಾಗ ಅಂತವರಿಗೆ ಸ್ಥಳೀಯ ಅಂಗನವಾಡಿ ಕೇಂದ್ರಕ್ಕೆ ಸ್ಥಾನಪಲ್ಲಟ ಮಾಡುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿ, ಅಂಗನವಾಡಿ ಕಾರ್ಯಕರ್ತೆ ವಾಸಿಸುವ ಸ್ಥಳವನ್ನು ಗಣನೆಗೆ ತೆಗೆದುಕೊಂಡು ಪ್ರಸ್ತಾಪಿತ ಅಂಗನವಾಡಿ ಕೇಂದ್ರದಲ್ಲಿ ಯಾರು ಕಾರ್ಯನಿರ್ವಹಿಸಬೇಕು ಎಂಬುದನ್ನು ಆಯ್ಕೆ ಸಮಿತಿ ನಿರ್ಧರಿಸತಕ್ಕದ್ದು ಯಾವುದಾದರು ತಕರಾರು ಕ್ಲೇಮ್‌ಗಳಿದ್ದಲ್ಲಿ ಪ್ರಕರಣದ ಸಂದರ್ಭವನ್ನು ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳತಕ್ಕದ್ದು ಎಂದು ತಿಳಿಸಲಾಗಿರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದನ್ನೇ ಗೊಂದಲ ಸೃಷ್ಟಿಯಾಗಿರುವುದು ಎಂದು ಹೇಳಿ ನಾನು ಗಮನ ಸೆಳೆಯುವ ಸೂಚನೆಯಲ್ಲಿ ತೆಗೆದುಕೊಂಡಿರುವುದು, ದಿನಾಂಕ 6.7.2004ಕ್ಕೆ ಒಂದು ಸರ್ಕ್ಯುಲರನ್ನು ಕೊಡುತ್ತೀರಿ. 27.8.04ಕ್ಕೆ ಒಂದು ಸರ್ಕ್ಯುಲರನ್ನು ಕೊಡುತ್ತೀರಿ. 16.11.04ಕ್ಕೆ ಒಂದು ಸರ್ಕ್ಯುಲರನ್ನು ಕೊಡುತ್ತೀರಿ, 10.1.05ಕ್ಕೆ ಒಂದು ಸರ್ಕ್ಯುಲರನ್ನು ಕೊಡತ್ತೀರಿ, 10.3.05ಕ್ಕೆ ಒಂದು ಸರ್ಕ್ಯುಲರನ್ನು ಕೊಡುತ್ತೀರಿ, ಆನಂತರ 14.9.05ಕ್ಕೆ ಒಂದು ಸರ್ಕ್ಯುಲರನ್ನು ಕೊಡುತ್ತೀರಿ. 14.10.05ಕ್ಕೆ ಒಂದು ಸರ್ಕ್ಯುಲರನ್ನು ಕೊಡುತ್ತೀರಿ. ಇದೆಲ್ಲದರಲ್ಲಿ ಇವರು ಹೇಳಿಕೊಂಡು ಬಂದಿದ್ದು ಆ ಭಾಗದಲ್ಲಿ ವಾಸವಾಗಿದ್ದು ಬೇರೆ ಎಲ್ಲಾದರೂ ಅಂಗನವಾಡಿಯಲ್ಲಿ ಕಾರ್ಯ ಮಾಡುತ್ತಿರುವಂಥ ಕಾರ್ಯಕರ್ತೆಯರಿಗೆ ಮೊದಲು ಆದ್ಯತೆಯನ್ನು ಕೊಟ್ಟು ಸ್ಥಾನಪಲ್ಲಟ ಮಾಡಿ ಆನಂತರ ಉಳಿದ ಅಂಗನವಾಡಿಗಳಿಗೆ ಆಯ್ಕೆಯಾಗಬೇಕೆನ್ನುವುದು ಒಂದು ಅಂಶ. ಎರಡನೇ ಅಂಶ, ತಾವು ಎಸ್ಎಸ್ಎಲ್ಸಿಯನ್ನು ಮೆರಿಟ್ ಇಟ್ಟುಬಿಟ್ಟು ಎಸ್ಎಸ್ಎಲ್ಸಿ ಯಲ್ಲಿ ಯಾರು ಜಾಸ್ತಿ ಅಂಕಗಳನ್ನು ತೆಗೆದುಕೊಂಡಿರುತ್ತಾರೆ, ಅವರನ್ನು ಆಯ್ಕೆ ಮಾಡಬೇಕೆನ್ನುವುದು ಎರಡನೇ ಅಂಶ. ಆ ಮಧ್ಯೆ 18 ಪರ್ಸೆಂಟ್ ಮೀಸಲಾತಿಯನ್ನು ತಾವು ಅಲ್ಲಿ ಉಳಿಸಿ ಕೊಡಬೇಕೆನ್ನುವುದು ಮೂರನೇ ಅಂಶ. ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಅಥವಾ ವಿಡೋಗಳು ಯರಾದರೂ ಇದ್ದರೆ ಅವರಿಗೆ ಆದ್ಯತೆಯನ್ನು ಕೊಡಬೇಕೆನ್ನುವುದು ನಾಲ್ಕನೇ ಅಂಶ. ಈಗಾಗಲೇ ಬೇರೆ ಬೇರೆ ಯೋಜನೆ ಕೆಳಗಡೆ ಕೆಲಸ ಮಾಡುತ್ತಿದ್ದವರು ಅಲ್ಲೇ ಖಾಯಂ ಆಗಬೇಕೆನ್ನುವುದು ಒಂದು ಅಂಶ. ಇಷ್ಟನ್ನು ಇಟ್ಟು ಒಂದು ಆಯ್ಕೆ ಸಮಿತಿಯನ್ನು ಮಾಡಿದ್ದಾರೆ. ಅದಕ್ಕೆ ಸನ್ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಅಧ್ಯಕ್ಷರು. ಕುಟುಂಬ ಕಲ್ಯಾಣ ಉಪ ನಿರ್ದೇಶಕರು ಉಪಾಧ್ಯಕ್ಷರು, ಶಾಸಕರುಗಳು ಮೆಂಬರ್. ಜಿಲ್ಲಾ ಪರಿಷತ್ ನಾಮಿನಿ ಒಬ್ಬರು ಮೆಂಬರ್, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಮೆಂಬರ್ ಎಂದು ಹೇಳಿದ್ದಾರೆ. ಒಂದೊಂದಾಗಿ ನಾನು ಸ್ವಲ್ಪ ಕಾಲವನ್ನು ತೆಗೆದುಕೊಂಡು ಕೇಳುತ್ತೇನೆ. ನೀವು ಮೆರಿಟ್ ಆಧರಿಸಿ ಆಯ್ಕೆ ಮಾಡಬೇಕೆಂದು ನಿರ್ಧಾರವನ್ನು ತೆಗೆದುಕೊಂಡ ಮೇಲೆ ಈ ಕಮಿಟಿಯ ಅಗತ್ಯ, ಔಚಿತ್ಯ ಏನು ಇದೆ ಎಂದು ಎನ್ನುವುದನ್ನು ಈ ಸಭೆಗೆ ತಿಳಿಸಬೇಕು. ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಆ ಊರಿನಲ್ಲಿ ಹಾಕಿರುವ ಅರ್ಜಿಗಳಲ್ಲಿ ಯಾರಿಗೆ ಹೆಚ್ಚು ಅಂಕಗಳು ಇದೆ, ಅವರನ್ನೇ ಆಯ್ಕೆ ಮಾಡಬೇಕೆಂದು ಸ್ಪಷ್ಟವಾಗಿ ಸರ್ಕ್ಯುಲರನ್ನು ಕೊಟ್ಟಾಗ ಆಯ್ಕೆ ಸಮಿತಿಯನ್ನು ಏಕೆ

ಮಾಡಿದಿರಿ ಎಂದು ಉತ್ತರವನ್ನು ಹೇಳಬೇಕು. ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ನಾವು ಯಾವ ರೀತಿಯಲ್ಲಿ ರಿಸರ್ವೇಷನ್‌ನ್ನು ಎಲ್ಲಿ ಕೊಡಬೇಕು ಎಂದು ತಾವು ಸ್ಪಷ್ಟೀಕರಣವನ್ನು ಕೊಡಲಿಲ್ಲ. ಈಗ ನನ್ನ ಕ್ಷೇತ್ರ 53–54 ಬರುತ್ತದೆ. 18 ಪರ್‌ಸೆಂಟ್ ರಿಸರ್ವೇಷನನ್ನು ಮೊದಲೇ ಕೊಡಬೇಕಾ? ನೋಟೀಫಿಕೇಷನ್ ಆಗಬೇಕಾದರೆ ಹೇಳಬೇಕಾ? ಮೊದಲೇ ಅಂಗನವಾಡಿ ನಿರ್ಧಾರ ಮಾಡಬೇಕಾ ಅಥವಾ ನಮಗೆ ಇಷ್ಟ ಬಂದವರಿಗೆ ನಾವು ಕೊಡುವಾಗ ಕೊಡಬೇಕಾ ಆಂತ. ಎರಡನೇ ಕ್ಲಾರಿಫಿಕೇಷನ್ ಕೊಡುವಾಗ ಹೇಳುತ್ತೀರಿ, ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಅಕಸ್ಮಾತ್ ಎಸ್‌ಎಸ್‌ಎಲ್‌ಸಿ ಆಗದೇ ಇರುವವರು ಇದ್ದರೆ ಎಂಟನೇ ಕ್ಲಾಸ್ ಪಾಸಾಗಿದ್ದರೂ ಪರವಾಗಿಲ್ಲ, ಅವರಿಗೆ ಕೊಡಬಹುದೆಂದು ಹೇಳುತ್ತೀರಿ. ಇಲ್ಲೂ ಕೂಡ ಆ ಗ್ರಾಮದಲ್ಲಿ ಯಾರೂ ಎಸ್‌ಎಸ್‌ಎಲ್‌ಸಿ ಪಾಸಾಗದೇ ಇರುವವರು ಇದ್ದರೆ ಎಸ್‌ಎಸ್‌ಎಲ್‌ಸಿ ಫೇಲ್ ಆಗಿದ್ದರೂ ಕೊಡಬಹುದು ಎಂದು ಹೇಳುತ್ತೀರಿ. ಮೂರನೆಯದು, ಇದು ಸರ್ಕಾರಿ ಉದ್ಯೋಗ ಅಲ್ಲ ಎಂದು ಒಪ್ಪಿಕೊಳ್ಳುತ್ತೀರಿ. ಈಗ ಏನಾಗಿದೆ, ನಾನು ಯಾರನ್ನು ದೂರಲಿಕ್ಕೆ ಇಲ್ಲಿ ನಿಂತಿಲ್ಲ. ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ಘಟನೆ ನಡೆಯಿತು. ನಾನು ಒಂದು ತಮ್ಮ ಗಮನಕ್ಕೆ ತಂದು ಇಲ್ಲಿ ಹೇಳಬೇಕಾಗಿದ್ದರೆ ಒಂದು ಆದೇಶವನ್ನು ಜಿಲ್ಲಾ ಪರಿಷತ್ತಿನವರು ಕಳುಹಿಸಿದರು. ಎಲ್ಲಾ ಅಂಗನವಾಡಿ ಪ್ರಕ್ರಿಯೆಗಳನ್ನು ಜಿಲ್ಲಾ ಪರಿಷತ್ ಸಭೆ ಆಗುವವರೆಗೂ ನಾನು ಸ್ಟೇ ಮಾಡಿದ್ದೇನೆಂದು ಹೇಳಿ ಅಧ್ಯಕ್ಷರು ಕಾಗದವನ್ನು ಬರೆದರು. ಅವತ್ತೇನು ಬರೆದರು, ಈ ಪ್ರಕ್ರಿಯೆ ಟ್ರಾನ್ಸ್‌ಫರ್ ಮಾಡುವ ಪ್ರಕ್ರಿಯೆ ಅಥವಾ ಅವರ ಸ್ಥಾನಪಲ್ಲಟ ಮಾಡುವ ಪ್ರಕ್ರಿಯೆ ಮುಗಿಯುವರೆಗೆ ನೀವು ಯಾವುದೇ ರೀತಿ ಅಂಗನವಾಡಿಗಳಿಗೆ ನೀವು ನೇಮಕ ಮಾಡಕೂಡದೆಂದು ಹೇಳಿ ಬರೆದಿರಿ. ಆಯ್ಕೆ ಮಾಡಕೂಡದೆಂದು. ನಾವು ಎಲ್ಲರಿಗೂ ಹೇಳಿದೆವು. ಇಲ್ಲಾ, ಆ ಪ್ರಕ್ರಿಯೆ ಮುಗಿಯುವರೆಗೆ ಸ್ಥಾನಪಲ್ಲಟ ಮಾಡುವಂಥ ಸ್ಥಿತಿ ಬರುವುದಿಲ್ಲ, ಸ್ಥಾನಪಲ್ಲಟ ಆಗುವುದು ತೀರ್ಮಾನ ವಾಗುವವರೆಗೆ ನಾವೇನೂ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದೆವು. ಆಮೇಲೆ ನಮಗೆ ಒಂದು ಸರ್ಕ್ಯುಲರನ್ನು ಬಂದಿದೆ. ನಾನು ಅದನ್ನು ಸನ್ಮಾನ್ಯ ಪ್ರಕಾಶ್‌ರವರಿಗೆ ಕಳುಹಿಸಿಕೊಡುತ್ತೇನೆ. Tumkur zilla parishad has clearly ordered. ಯಾವುದೇ ಸ್ಥಾನಪಲ್ಲಟಕ್ಕೆ ಅವಕಾಶ ಇಲ್ಲ. ಎಲ್ಲದಕ್ಕೂ ಅಫ್ರೆಷ್ ಆಗಿ ನೀವು ನೋಟಿಫಿಕೇಷನನ್ನು ಕೊಟ್ಟು ಆಯ್ಕೆಯನ್ನು ಮಾಡಬೇಕು, ಎಂದು ಸ್ಪಷ್ಟವಾಗಿ ಬರೆದಿದ್ದಾರೆ. Vice Presiden, Zilla Parishat, Tumkur ಲೆಟರ್‌ನಲ್ಲಿ

ಬರೆದಿದ್ದಾರೆ. ಈಗ ನಾವು ಗೊಂದಲಕ್ಕೆ ಸಿಕ್ಕಿಹಾಕಿಕೊಂಡುಬಿಟ್ಟಿದ್ದೇವೆ ಶಾಸಕರು ಇರಬಹುದು, ಆಯ್ಕೆ ಸಮಿತಿಯವರು ಇರಬಹುದು. ಪಾಪ, ಆಫೀಸರ್ಸ್ ಬರುತ್ತಾರೆ, ನಾನೊಂದು ಉದಾಹರಣೆಯನ್ನು ಹೇಳುತ್ತೇನೆ. ತಿಪಟೂರು ತಾಲ್ಲೂಕು ತಿಪಟೂರಿನಲ್ಲಿ ಈಗಾಗಲೇ 14ನ್ನು ಸ್ಥಾನಪಲ್ಲಟ ಮಾಡಿಬಿಟ್ಟಿದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲಿ ಬಂದೂ ಮಾಡಿರಲಿಲ್ಲ. ನಾವು ಜಿಲ್ಲಾ ಪರಿಷತ್ ಆದೇಶಕ್ಕೆ ಒಳ್ಳೆಯ ಗೌರವ ಕೊಟ್ಟು ಏನು ಕೊಡುತ್ತಾರೆಂದು ಕಾಯುತ್ತಾ ಕುಳಿತಿದ್ದೆವು. ಇದು ಹೇಗೆ ಸಾಧ್ಯ? ಯಾರು ರಿಕ್ರೂಟ್‌ಮೆಂಟ್ ಮಾಡುವುದು? ಯಾರು ಆದೇಶ ಕೊಡುವುದು? ಡೈರೆಕ್ಟರ್ ಮಾತು ಕೇಳಬೇಕೇ? ಜಿಲ್ಲಾ ಪರಿಷತ್‌ನವರ ಮಾತು ಕೇಳಬೇಕೇ? ಜಿಲ್ಲಾ ಪರಿಷತ್‌ನ ಅಧ್ಯಕ್ಷರ ಮಾತು ಕೇಳಬೇಕೇ? ಜಿಲ್ಲಾ ಪರಿಷತ್‌ನ ಅಧ್ಯಕ್ಷರ ಮಾತು ಕೇಳಬೇಕೇ? ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರನ್ನು ನೀವು ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಅವರು ಇಲ್ಲಿಯವರೆಗೆ ಏನೂ ಹೇಳದಿರುವುದನ್ನು ಕೇಳಬೇಕೇ? ನಿಮ್ಮ ಬಾಲ ವಿಕಾಸ ಯೋಜನಾಧಿಕಾರಿಯವರ ಮಾತು ಕೇಳಬೇಕೆ? ಇದೆಲ್ಲದರ ಮಧ್ಯೆ ಶಾಸಕರು ಅಲ್ಲಿ ಇರಬೇಕೇ? ಇರುವುದಾದರೆ, ಯಾವ ಗೌರವಯುತ ಹುದ್ದೆಯಲ್ಲಿ ನಾವು ಅಲ್ಲಿ ಇರಬೇಕು? ಒಬ್ಬ ಸಾಮಾನ್ಯ ಸದಸ್ಯರನ್ನಾಗಿ ಮಾಡಿ, ಶಾಸಕರನ್ನು ಅಲ್ಲಿ ಕೂರಿಸಿ ಜವಾಬ್ದಾರಿ ಎಲ್ಲವನ್ನೂ ನಮ್ಮ ತಲೆ ಮೇಲೆ ಎಳೆದು ಆಯ್ಕೆಯನ್ನು ಮೆರಿಟ್ ಮೇಲೆ ಮಾಡುತ್ತೇವೆಂದರೆ ಹೇಗೆ? ಬೇರೆ ಸದಸ್ಯರ ಭಾವನೆಗಳೇನೆಂದು ನನಗೆ ಗೊತ್ತಿಲ್ಲ. ಕೈ ಮುಗಿದು ಕೇಳಿಕೊಳ್ಳುತ್ತೇನೆ. Non-Official Members ಏನಿದ್ದಾರೆ, ಅದರೊಳಗೆ ದಯಮಾಡಿ ತೆಗೆದುಬಿಡಿ. ಉತ್ತರ ಹೇಳುವುದಕ್ಕೆ ನಾವು, ಆಯ್ಕೆ ಮಾಡುವುದಕ್ಕೆ ಅವರು. ಇನ್ನು ಎರಡನೆಯ ಸಲಹೆ ಏನೆಂದರೆ, Pulic notification through newspaper ಕೊಡಿ ಎಂದು ನೀವು ಹೇಳುತ್ತೀರಿ. ಇನ್ನೊಂದು ಸಲಹೆ, ನಿನ್ನೆ ತಾವು ಸ್ಪಷ್ಟವಾಗಿ ಆದೇಶ ಕೊಡುತ್ತೀರಿ. ಪಂಚಾಯತ್ ನೋಟೀಸ್ ಬೋರ್ಡ್‌ನಲ್ಲಿ ಅಂಟಿಸಿ, ಊರಿನಲ್ಲಿರುವ ಸ್ಕೂಲ್ ನೋಟೀಸ್ ಬೋರ್ಡ್ ಮೇಲೆ ಅಂಟಿಸಿ ಎಂದು. ಯಾರು ಬಂದು ಆ ಶಾಲೆ ನೋಟೀಸ್ ಬೋರ್ಡ್ ಮೇಲೆ ಅಂಟಿಸಿರುವುದನ್ನು ನೋಡಿಕೊಂಡು ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಹಾಕುವುದಕ್ಕಾಗುತ್ತದೆ? ಸನ್ಮಾನ್ಯ ಪ್ರಕಾಶ್‌ರವರೆ, ಗ್ರಾಮ ಪಂಚಾಯಿತಿ ಕಾರ್ಯಾಲಯದ ನೋಟೀಸ್ ಬೋರ್ಡ್ ಮೇಲೆ ಗ್ರಾಮ ಪಂಚಾಯಿತಿಯ ಹೆಡ್‌ಕ್ವಾರ್ಟರ್ಸ್ ಇರುವ ಊರುಗಳಲ್ಲಿ ಇವುತ್ತು

ಹೊಸ ಅಂಗನವಾಡಿಗಳಾಗುವ ಸ್ಥಿತಿ ಇಲ್ಲ. ಇಲ್ಲಿ ಮುನ್ನೂರಕ್ಕಿಂತಲೂ ಕಡಿಮೆ ಜನಸಂಖ್ಯೆ ಇತ್ತು ಹೋದ ಸಲ ಯೋಜನೆ ಕೆಳಗೆ ಆಯ್ಕೆ ಮಾಡುವುದಕ್ಕಾಗಿರಲಿಲ್ಲ. ಅಂತಹ ಚಿಕ್ಕ ಚಿಕ್ಕ ಊರುಗಳಲ್ಲಿ ಸೆಂಟರ್‌ಗಳಾಗಿವೆ. ಇವೊತ್ತು ಆ ಊರುಗಳಲ್ಲಿ ಗ್ರಾಮ ಪಂಚಾಯಿತಿ ಇಲ್ಲ, ಆ ಊರುಗಳಲ್ಲಿ ಸ್ಕೂಲುಗಳಿಲ್ಲ, ಆ ಊರಿನವರಿಗೆ ಗೊತ್ತಾಗುತ್ತಿಲ್ಲ. ನಾವು ಕೇಳುವುದೇನೆಂದರೆ, ಆ ಊರಿಗೆ ಸೊಸೆಗೆ ಮಾತ್ರ ಸೀಮಿತವಾಗಿ ಅರ್ಜಿ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ. ಇನ್ನೊಂದು ಸಲಹೆ ಏನೆಂದರೆ, ಆ ಊರಿನ ಸೊಸೆಗೆ ಸೀಮಿತವಾಗಿ ಅರ್ಜಿ ತೆಗೆದುಕೊಳ್ಳಿರೆಂದು ನೀವು ಆದೇಶಗಳನ್ನು ಕಳುಹಿಸುತ್ತೀರಿ, ಏನು ಸರ್ಕಾರವಿದು? ಒಂದು ಸಣ್ಣ ಅಂಗನವಾಡಿ ಕಾರ್ಯಕರ್ತೆ ಹುದ್ದೆ ಆಯ್ಕೆಗೆ ಇಷ್ಟು ಸರ್ಕ್ಯುಲರ್, ಇಷ್ಟು ನಿಬಂಧನೆ. ಒಂದೇ ಒಂದು ಮಾಹಿತಿ ಸ್ಪಷ್ಟವಿಲ್ಲ. ನಾನು ಸ್ಪಷ್ಟವಾಗಿ ಕೇಳುತ್ತೇನೆ: How to maintain SC reservation? Who will maintain and which centre will be given for SC? ನೀವು ಹೇಳಬೇಕಲ್ಲಾ ಆದ್ಯತೆ ಏನು? ಎಸ್.ಸಿ. ಪಾಪ್ಯುಲೇಶನ್ ಮೇಲೆ ಆದ್ಯತೆ ಕೊಡುತ್ತೀರಾ? Whole centre ಗಳಲ್ಲಿ ಎಸ್.ಸಿ.ಯವರು ಎಲ್ಲಿ ಅರ್ಜಿ ಹಾಕಿದ್ದಾರೋ, ಅವರಿಗೆ accommodate ಮಾಡಿ ಬೇರೆಯವರಿಗೆ ಮಾಡಿ ಎಂದು ಹೇಳುತ್ತೀರಾ? ಸ್ಥಾನಪಲ್ಲಟ ಮಾಡಿದವರನ್ನು ಆ ಲಿಸ್ಟ್‌ನಲ್ಲಿ ಸೇರಿಸಿಕೊಳ್ಳುತ್ತೀರಾ? ಸ್ಥಾನಪಲ್ಲಟವನ್ನು ಯಾರು ಮಾಡಬೇಕು? Outside Taluk ಮಾಡಬೇಕೇ? Outside District ಮಾಡಬೇಕೇ? Within Taluk ಮಾಡಬೇಕೇ? ಯಾರದರೂ ಹೇಳಬೇಕಲ್ಲಾ. ಇದೇನೂ ಇಲ್ಲದೆ ಏಕಾಏಕಿ ಜಿಲ್ಲಾ ಪರಿಷತ್‌ನವರು ನಿಲ್ಲಿಸುತ್ತೇವೆಂದು ಹೇಳುವುದು. ತುಮಕೂರಿಗೆ ಸಂಬಂಧಿಸಿದಂತೆ ತಾವು ಆದೇಶ ಮಾಡಿದ್ದೀರಿ. ನಾನು ಈಗ ಕಳುಹಿಸಿಕೊಡುತ್ತೇನೆ. ನಾನು ಆದೇಶದ ಎಲ್ಲಾ ಪ್ರತಿಗಳನ್ನೂ ಇಟ್ಟುಕೊಂಡಿದ್ದೇನೆ. ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆಯನ್ನು ಜಿಲ್ಲಾ ಪರಿಷತ್ ಸಭೆ ನಡೆಯುವವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ನಮ್ಮ ಜಿಲ್ಲಾ ಪರಿಷತ್ ಅಧ್ಯಕ್ಷರು ಆದೇಶಿಸುತ್ತಾರೆ. To what extent, it is binding on us? ಇದಕ್ಕೆ ಸರ್ಕಾರ ಉತ್ತರಿಸಬೇಕು. ಮುಂದಿನ ಅಧ್ಯಕ್ಷರು ಈಗ ಆದೇಶ ಕೊಟ್ಟಿದ್ದಾರೆ. No ಸ್ಥಾನಪಲ್ಲಟ. No replacement can be entertained. Only fresh candidates has to be selected. ಯಾವ ಆಧಾರದ ಮೇಲೆ ಹೇಳುತ್ತೀರಿ? ಡೈರೆಕ್ಟರ್ ಮಾತು ಕೇಳಿ ರಿಕ್ರೂಟ್‌ಮೆಂಟ್ ಮಾಡಬೇಕೇ? ಜಿಲ್ಲಾ ಪರಿಷತ್ ಅಧ್ಯಕ್ಷರ ಮಾತು ಕೇಳಿ ರಿಕ್ರೂಟ್‌ಮೆಂಟ್ ಮಾಡಬೇಕೇ? ಮತ್ತು

ಇದಕ್ಕೆ ರಿಕ್ರೂಟ್‌ಮೆಂಟ್ ಎಂದು ಏಕೆ ಕರೆಯುತ್ತೀರಿ? ನಾನು ತಮ್ಮ ಮೂಲಕ ಅವರಲ್ಲಿ ಬಿನ್ನಹ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಕಮಿಟಿಯನ್ನು abandon ಮಾಡಿ, ರದ್ದುಗೊಳಿಸಿ. ನೀವು ಒಳ್ಳೆಯದನ್ನು ಮಾಡಬೇಕೆಂದರೆ ಗ್ರಾಮಸಭೆ ಮಾಡಿಕೊಡಿ. ಹೊಡೆದಾಟ, ಗುದ್ದಾಟ ಎಲ್ಲವನ್ನೂ ಊರಿನವರು ಮಾಡಿಕೊಳ್ಳುತ್ತಾರೆ. ಅವರಿಗೆ ಇಷ್ಟ ಬಂದವರಿಗೆ ಕೆಲಸ ಕೊಟ್ಟುಕೊಳ್ಳುತ್ತಾರೆ. ಅವರ ಹಣೆಬರಹ. ಅದನ್ನು ನೀವು ನಮ್ಮ ತಲೆಗೇಕೆ ತರುತ್ತೀರಿ? 4–5 ಜನರು ಅರ್ಜಿ ಹಾಕಿರುತ್ತಾರೆ. ನಮಗೆ ಇಷ್ಟ ಬಂದವರಿಗೆ ಸಹಾಯ ಮಾಡುವು ದಕ್ಕಾಗುವುದಿಲ್ಲ. ನಾವು ಕುಳಿತುಕೊಂಡು ಎದ್ದು ಬರಿದು ಊರಿನಲ್ಲಿರುವವರೆಲ್ಲ ರಿಂದಲೂ ಎಂ.ಎಲ್.ಎ.ಗಳು ಉಗಿಸಿಕೊಳ್ಳಬೇಕೆಂದು ನಿಮ್ಮ ಭಾವನೆಯೇ? ದಯಮಾಡಿ ಆ ಕಮಿಟಿಗೆ ಶಾಸಕರನ್ನು ಏನಾದರೂ ಅಧ್ಯಕ್ಷರನ್ನಾಗಿ ಮಾಡಬೇಕೆಂಬ ದೊಡ್ಡತನ ತೋರಿಸಿದರೆ, ಮಾಡಿ. ಇಲ್ಲದಿದ್ದರೆ, ನಮ್ಮನ್ನು ಅಲ್ಲಿಂದ ತೆಗೆದುಬಿಡಿ. ನಾವು ಒಬ್ಬ ಅಂಗನವಾಡಿ ಸಹಾಯಕ ನಿರ್ದೇಶಕರ ಕೆಳಗೆ ಮೆಂಬರ್ ಆಗಿ ಕುಳಿತುಕೊಂಡು ಯಾರಿಗೋ ಕೆಲಸ ಕೊಡುವ ಹೀನ ಸ್ಥಿತಿಗೆ ಶಾಸನಸಭೆಯ ಸದಸ್ಯರುಗಳನ್ನು ದಯಮಾಡಿ ತರಕೂಡದು. ಅಲ್ಲಿ ಆಯ್ಕೆ ಸಮಿತಿಗೆ ಆಗದಿದ್ದರೆ, ನಮಗೆ ಸಂತೋಷ, ನನಗಂತೂ ಸಂತೋಷ. ಆಯ್ಕೆ ಮಾಡಬೇಕೆಂದರೆ, ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿ. ಆಯ್ಕೆಯನ್ನು ನೀವು ಮೆರಿಟ್ ಮೇಲೆ ಮಾಡುತ್ತೇವೆಂದರೆ, ನಮ್ಮನ್ನು ರದ್ದುಗೊಳಿಸಿ, Just marks card verification ಮಾಡುವ ಕೆಲಸಕ್ಕೆ ಶಾಸಕರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಜಿಲ್ಲಾ ಪರಿಷತ್‌ಗೆ ನಾಮಿನಿಯ ಅಗತ್ಯವಿದೆಯೆಂದು ನಾನು ಭಾವಿಸುವುದಿಲ್ಲ. ಟೀಚರ್ ರಿಕ್ರೂಟ್‌ಮೆಂಟ್, ಮತ್ತೊಂದು ಮಾಡುತ್ತೀರಿ, ಹಾಗೇ ಮಾಡಿಕೊಂಡು ಹೋಗಬೇಕು ಮತ್ತು ಮೊದಲು doubt clear ಮಾಡಬೇಕು. ಸ್ಥಾನಪಲ್ಲಟ ಮಾಡಿ ಮಾಡಬೇಕೆಂಬುದನ್ನು ನಾವು ಫಾಲೋ ಮಾಡಬೇಕೇ? ಬೇಡವೇ? ಜಿಲ್ಲಾ ಪರಿಷತ್‌ಗಳು ಏನಾದರೂ ಇದರ ಮೇಲೆ ಕೊಡುತ್ತಿರುವ ಆದೇಶವನ್ನು ಅಲ್ಲಿರುವ CDPO ಗಳು ಮಾಡಬೇಕೇ? ಈಗಾಗಲೇ ನೋಟಿಫಿಕೇಶನ್ ಇಶ್ಯೂ ಆಗಿದೆ. ಚಿಕ್ಕನಾಯಕನಹಳ್ಳಿಯಲ್ಲಿ ನಾವು ಯಾವುದೇ ಸ್ಥಾನಪಲ್ಲಟ ಮಾಡದ ರೀತಿಯಲ್ಲಿ ಇವೊತ್ತು ನೋಟಿಫಿಕೇಶನ್ ಇಶ್ಯೂ ಮಾಡಿದ್ದೀರಿ. ತಿಪಟೂರಿನಲ್ಲಿ ಸ್ಥಾನಪಲ್ಲಟ ಮಾಡಿ ನೋಟಿಫಿಕೇಶನ್ ಇಶ್ಯೂ ಮಾಡಿದ್ದೀರಿ. ನಾವು ಹೇಗೆ ಉತ್ತರಿಸುವುದು? Part of Tumkurಗೆ ನಾನು ಎಂ.ಎಲ್.ಎ ಆಗಿದ್ದೇನೆ. ಅಲ್ಲಿ ಹಾಗೆ ಮಾಡಿದ್ದರು, ಇಲ್ಲಿ ಹೀಗೆ ಹೇಳುತ್ತೀರಿ

ಎನ್ನುವ ಪ್ರಶ್ನೆ. ಎರಡು ಕಾನೂನುಗಳು ನಮ್ಮ ಮುಂದೆ ನಿಂತಿದೆ. ದಯಮಾಡಿ ಇದನ್ನು ತಾವು ಕ್ಲಾರಿಫೈ ಮಾಡಬೇಕು. ಇನ್ನೂ ಮಾತನಾಡುವವರಿದ್ದಾರೆ. ಅದಕ್ಕೋಸ್ಕರ, ನಾನು ಈ ಸ್ಟೇಜ್‌ಗೆ ಬಂದು ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

ಅಧ್ಯಕ್ಷರು: ಈಗ ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಚರ್ಚೆ ಅಲ್ಲ. ನಾವು ಸಹಿ ಮಾಡಿದ್ದೇವೆ.

ಅಧ್ಯಕ್ಷರು: ಹಾಗಲ್ಲ ಸ್ವಾಮಿ. ಈಗ ಏನಾಗಿದೆ ಎಂದರೆ, ಈ ತರಹ Calling Attentionಗೂ ಎಲ್ಲರೂ ಸೈನ್ ಹಾಕಿ ಎಲ್ಲರೂ ಕೇಳುತ್ತಿದ್ದರೆ, ಇದೇನೆಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಾವು ಮೂರು ಜನರು ಸಹಿ ಮಾಡಿದ್ದೇವೆ. ನನ್ನ ಹೆಸರು ವಾಟಾಳ್ ನಾಗರಾಜ್, ಇವರ ಹೆಸರು ಮಾಧುಸ್ವಾಮಿ, ಇವರು ಶ್ರೀರಾಮರೆಡ್ಡಿ. ಈ ರೀತಿ ನಮ್ಮ ಮೂವರ ಹೆಸರುಗಳನ್ನು ಹಾಕಿದ್ದೇವೆ. ಒಂದೊಂದು ಸಾಲು ಹೇಳುತ್ತೇವೆ.

ಶ್ರೀ ಮಹದೇವ್: ಮಾನ್ಯ ಸಭಾಧ್ಯಕ್ಷರೆ, Calling Attentionನಲ್ಲಿ ಮೂರು ಜನರು ಸಹಿ ಹಾಕಿರಬಹುದು. ಆದರೆ, ಈ ಸದನದ ಎಲ್ಲಾ ಸದಸ್ಯರುಗಳ ಒಂದು ಪ್ರಶ್ನೆ ಏನೆಂದರೆ, ಇವೊತ್ತು ಗೌರವದ ಪ್ರಶ್ನೆ ಇದೆ. ಊರಿನಲ್ಲಿ ನಮ್ಮೆಲ್ಲರನ್ನೂ ಉಗಿಸುವುದಕ್ಕೆ ಮಾಡಿರುವ ವ್ಯವಸ್ಥೆ ಇದಾಗಿದೆ. ಮಾನ್ಯ ಮಾಧುಸ್ವಾಮಿಯವರು ಹೇಳಿರುವುದು ಅಕ್ಷರಶಃ ಸತ್ಯ. ಬೈಸಿಕೊಳ್ಳುವುದಕ್ಕೆ ಮಾತ್ರ ನಾವು, ಅಪಾಯಿಂಟ್‌ಮೆಂಟ್ ಮಾಡುವುದಕ್ಕೆಲ್ಲಾ ಆಫೀಸರ್ಸ್! ಈ ವ್ಯವಸ್ಥೆ ಬೇಡ. ದಯವಿಟ್ಟು ಟ್ರಾನ್ಸ್‌ಫರ್, ಮೆರಿಟ್, ಎಸ್.ಸಿ. ರೂಲ್ಸ್ ಫಿಕ್ಸ್ ಮಾಡುವುದೆಲ್ಲಾ ಬೇಡ. ಇದರಿಂದ ಶಾಸಕರುಗಳಿಗೆ ಮರ್ಯಾದೆ ಕಡಿಮೆಯಾಗುತ್ತದೆ. 20 ಅಂಗನವಾಡಿಗಳಿಗೆ ಎರಡು ಸಾವಿರ ಅರ್ಜಿಗಳು ಬರುತ್ತವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈಗ ಮಾಧುಸ್ವಾಮಿಯವರು ಹೇಳಿದ ಸಲಹೆಯನ್ನು ನಾನು ಬೆಂಬಲಿಸುತ್ತಾ ಈ ಆಯ್ಕೆ ಸಮಿತಿ ಒಬ್ಬ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳ ಕೈಕೆಳಗೆ, ಸದಸ್ಯರುಗಳಾಗಿ ಶಾಸಕರು ಇಲ್ಲಿರತಕ್ಕಂಥಾದ್ದು ಇದೆಯಲ್ಲ, ಇದು ನಿಜಕ್ಕೂ ಬಹಳ ಅತ್ಯಂತ ಅಗೌರವ. ಇದು ಒಳ್ಳೆಯ ಸೂಚನೆಯಂತೂ ಅಲ್ಲ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು. ಈ ಸದನದ ಸದಸ್ಯರು ಯಾವ ಒಬ್ಬ ಆಫೀಸರ್ ಕೈಕೆಳಗೆ ಸದಸ್ಯರಾಗತಕ್ಕಂಥಾದ್ದು ಒಳ್ಳೆಯದಲ್ಲ. ಎರಡನೆಯದು, ಅಂಗನವಾಡಿ ಕಾರ್ಯಕರ್ತೆಯರ ಶೋಷಣೆ ಅನೇಕ ಕಡೆಗಳಲ್ಲಿ ನಡೆಯುತ್ತಿದೆ.

ಅದನ್ನು ತಪ್ಪಿಸುವುದಕ್ಕೆ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಮೂರನೆಯದಾಗಿ, ಅವರಿಗೆ ಕೆಲಸದ ಭದ್ರತೆ ಇಲ್ಲ. ಈ ಭದ್ರತೆ ಬಗ್ಗೆ ಹೇಳುವುದಾದರೆ, ಅವರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಒಂದು ರೀತಿ ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎಂಬುಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾಲ್ಕನೆಯದಾಗಿ, ನೀವು ಕೇಂದ್ರಕ್ಕಾದರೂ ಬರೆಯಿರಿ ಅಥವಾ ನೀವೇ ಆದರೂ ಹೆಚ್ಚು ಸಂಬಳ ಕೊಡುವುದಕ್ಕೆ ಪ್ರಾಮಾಣಿಕವಾಗಿ ತೀರ್ಮಾನ ಮಾಡಬೇಕು. ಇದು ನನ್ನ ಸಲಹೆಯಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಸ್ವಲ್ಪ ಗಮನ ಕೊಡಬೇಕು.

ಅಧ್ಯಕ್ಷರು: ಈಗ ಏನಾಗಿದೆ ನೋಡಿ. "Where a notice is signed by more than one member, it shall be due to have been by the first signatory only" ಆದರೆ, ಎಲ್ಲರೂ ಮಾತನಾಡುತ್ತಿದ್ದಾರೆ. ನಾನು ಏಕೆ ಹೇಳುತ್ತೇನೆಂದರೆ, ಈ ತರಹ ಆದರೆ... ನಾವು ಪ್ರಮುಖವಾದ ಅನೇಕ ವಿಚಾರಗಳನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಹಾಗಾದರೆ, ಅಧಿವೇಶನ ಮೂರು ತಿಂಗಳು ನಡೆಯುತ್ತದೆಯೇ?

ಶ್ರೀ ಮಹದೇವ್: ಇದು ಎಲ್ಲಾ ಶಾಸಕರುಗಳಿಗೂ ಸಂಬಂಧಪಟ್ಟ ವಿಚಾರವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ವಿಷಯವನ್ನು raise ಮಾಡಿದ್ದು ನಾನೊಬ್ಬನೇ Clarification will have to be asked by all signatories. ತಾವು ಮುಂದಕ್ಕೆ ರೂಲ್ಸ್ ಓದಿ.

ಅಧ್ಯಕ್ಷರು: ಅಷ್ಟೇ.

ಶ್ರೀ ಜೆ.ಸಿ. ಮಾಧುಸ್ವಾಮಿ: ರೂಲ್ ಕೇಳುವುದಕ್ಕೆ ಸಿಗ್ನೇಚರ್ ಹಾಕುವುದಾದರೆ, ಸುಮ್ಮನೆ ಏಕೆ ಸಿಗ್ನೇಚರ್ ಹಾಕುತ್ತೇವೆ?

ಶ್ರೀ ಎಂ.ಪಿ. ಪ್ರಕಾಶ್: ಅವರು ಭಾಷಣ ಮಾಡುವುದಕ್ಕೆ ಎಂದರು, ನಾವು ಅದು ಆಗುವುದಿಲ್ಲವೆಂದು ಹೇಳಿದೆವು.

ಶ್ರೀ ವಾಟಾಳ್ ನಾಗರಾಜ್: ಭಾಷಣ ಏನಲ್ಲ. 1, 2, 3, ಇದು ಭಾಷಣವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿ ಯವರು ಹೇಳಿದಂತಹ ಎಲ್ಲಾ ವಿಚಾರಗಳೂ ಕೂಡ ನಮ್ಮದೂ ಆಗಿವೆ. ಅದರ ಜೊತೆಗೆ ನೀವು ಮೆರಿಟ್, ರೋಸ್ಟರ್ ಸಿಸ್ಟಮ್ ಅಳವಡಿಸಿ ಎಂದರೆ, ನೀವು

ಅವರಿಗೇನೂ permanent job ಕೊಡುತ್ತಿಲ್ಲ. ಅದು ಗೌರವ ಹುದ್ದೆ ಎಂದು ನೀವು ಕೊಡುತ್ತಿರುವುದು. ಆ ರೀತಿ ಗೌರವ ಹುದ್ದೆ ಎಂದು ಕೊಡುವಾಗ ಮೆರಿಟ್, ರೋಸ್ಟರ್, ಎಲ್ಲವನ್ನೂ ಫಾಲೋ ಮಾಡುವುದಾದರೆ, ಅವರುಗಳನ್ನು ಪರ್ಮನೆಂಟ್ ಮಾಡಿ. ಇಲ್ಲದಿದ್ದರೆ, ರೋಸ್ಟರ್, ಮೆರಿಟ್‌ನ ಅವಶ್ಯಕತೆ ಇಲ್ಲ. ರೋಸ್ಟರ್, ಮೆರಿಟ್ ಬೇಕು ಎಂದರೆ, ಈ ಕಮಿಟಿಯನ್ನು ರದ್ದುಗೊಳಿಸಿ ಅವರಿಗೆ permanent job ಕೊಡಿ, ಕಮಿಟಿಯ ಅವಶ್ಯಕತೆಯಿಲ್ಲ. ಮೂರನೆಯದಾಗಿ, ಅಂಗನವಾಡಿ ಸಹಾಯಕಿಯರನ್ನು ನೇಮಕ ಮಾಡುವಾಗ 18 ವರ್ಷಕ್ಕೆ ಮೇಲ್ಪಟ್ಟ, ಸ್ಥಳೀಯ ಮಹಿಳೆ, ನಾಲ್ಕನೇ ತರಗತಿಯಲ್ಲಿ ತೇರ್ಗಡೆಯಾಗಿರುವ, ಗ್ರಾಮಸ್ಥರಿಂದ ಒಪ್ಪಿಗೆ ಪಡೆದ ಮಹಿಳೆಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಜಿಲ್ಲಾ ನಿರ್ದೇಶಕರ ಅನುಮೋದನೆ ಮೇರೆಗೆ ಗುರುತಿಸುವುದು ಹಾಗಾದರೆ ನಮ್ಮದೇನು ಕೆಲಸ? ಗ್ರಾಮಸ್ಥರಿಂದ ಒಪ್ಪಿಗೆ ಪಡೆದ ಮಹಿಳೆಯನ್ನು ಶಿಶುಅಭಿವೃದ್ಧಿ ಯೋಜನಾ ಅಧಿಕಾರಿಗಳು ಜಿಲ್ಲಾ ನಿರ್ದೇಶಕರ ಅನುಮೋದನೆಯ ಮೇರೆಗೆ ಗುರುತಿಸುವರು. ಹಾಗಾದರೆ ನಮ್ಮದೇನು ಕೆಲಸ? ಕಮಿಟಿಯದ್ದು ಏನು ಕೆಲಸ? ಗ್ರಾಮಸ್ಥರು ಒಪ್ಪಿಗೆ ಪಡೆದಂಥವರಿಗೆ ಕೊಡುವುದಾದರೆ ನಮ್ಮ ಕಮಿಟಿಯವರಿಗೆ ಏನು ಕೆಲಸ? ಈ ಕಮಿಟಿ ಏಕೆ ಬೇಕು? ಗ್ರಾಮಸ್ಥರು ಎಂದರೆ ಯಾರು? ಇದು ಎರಡನೆಯ ಪ್ರಶ್ನೆ. ಮೂರನೆ ಪ್ರಶ್ನೆ ಬಹಳ ಮುಖ್ಯರಾಗಿರತಕ್ಕದ್ದು. ನೀವು ಸ್ಥಳೀಯರಿಗೆ ಕೊಡಬೇಕು ಎಂಬುದರಲ್ಲಿ ನಮ್ಮದೇನು ಭಿನ್ನಾಭಿಪ್ರಾಯವಿಲ್ಲ. ಕೆಲವು ಸಂದರ್ಭಗಳಲ್ಲಿ ಆ ಹಳ್ಳಿಯಲ್ಲಿ ಅರ್ಹತೆ ಇಲ್ಲದೆ ಇರತಕ್ಕವರು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಸ್ಥಳೀಯರಿಗೆ ಕೊಟ್ಟಮೇಲೆ ಸ್ಥಾನಪಲ್ಲಟ ಪ್ರಶ್ನೆ ಹೇಗೆ ಬರುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸ್ಥಳೀಯರಿಗೆ ಕೊಡಬೇಕೆಂದು ಹೇಳುತ್ತೀರಿ. ಸ್ಥಾನಪಲ್ಲಟ ಕೊಡಬೇಕೆಂದು ಹೇಳುತ್ತೀರಿ. ನೀವು ಸ್ಥಾನಪಲ್ಲಟ ಕೊಟ್ಟಮೇಲೆ ಸ್ಥಳೀಯರಿಗೆ ಕೊಡತಕ್ಕ ಪ್ರಶ್ನೆ ಬರುವುದಿಲ್ಲ. ಇದು ಯಾವ ರೀತಿಯಾದ ನಿಯಮವೆಂದು ನಮಗೆ ಅರ್ಥವಾಗುವುದಿಲ್ಲ. ನಮ್ಮನ್ನು ಅದಕ್ಕೆ ಹಾಕಬೇಡಿ ಎಂದು ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಬೈಸಿಕೊಳ್ಳತಕ್ಕಂಥವರು, ಉಗಿಸಿಕೊಳ್ಳತಕ್ಕವರು ನಾವು. ಕೆಲಸ ಕೊಡತಕ್ಕವರು ಅವರು. ನೀವು ಯಾವ ರೀತಿಯಾಗಿ ಮನೆಯ ಹಂಚಿಕೆಯನ್ನು ಗ್ರಾಮಪಂಚಾಯಿತಿಯವರಿಗೆ ಒಪ್ಪಿಸಿಬಿಟ್ಟಿದ್ದೀರಿ ಇದನ್ನು ದಯವಿಟ್ಟು ಒಪ್ಪಿಸಿಬಿಡಿ. ನಮಗೆ ಆ ಕಮಿಟಿಯಲ್ಲಿರಬೇಕೆಂಬ ಹುಚ್ಚೇನೂ ಇಲ್ಲ. ಅದರಲ್ಲಿ ನಾವು

ಏನಾದರೂ ಇರಬೇಕೆಂದರೆ ನಮ್ಮ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡುವುದಾದರೆ ನಮ್ಮನ್ನು ಅಲ್ಲಿ ಇಡಿ. ಇಲ್ಲದಿದ್ದರೆ ನಮಗೆ ಆ ಕಮಿಟಿ ಬೇಡವೇ ಬೇಡ. ಗ್ರಾಮಸಭೆಗಳಲ್ಲಿ ಈಗ ಮನೆಗಳನ್ನು ಹೇಗೆ ಸೆಲೆಕ್ಟ್ ಮಾಡುತ್ತಿದ್ದೀರಿ ಆ ರೀತಿ ಮಾಡಿ. ಅದರಲ್ಲೂ ಬಹಳ ಸೀರಿಯಸ್ ಆಗಿ ಹೇಳುತ್ತಿದ್ದೇನೆ ಗ್ರಾಮಸ್ಥರಿಂದ ಒಪ್ಪಿಗೆ ಪಡೆದ ಮಹಿಳೆಯನ್ನು ಎಂದು ಹೇಳಿದ್ದೀರಿ. ಹಾಗಾದರೆ ಕಮಿಟಿ ಏಕೆ ಬೇಕು? ಛೇರ್ಮನ್ ಏಕೆ ಬೇಕು? ಸಂದರ್ಶನವೇಕೆ ಬೇಕು? ಮಾನ್ಯ ಪ್ರಕಾಶ್‌ರವರೆ ತಾವು ದಯವಿಟ್ಟು ಆಲೋಚನೆ ಮಾಡಿ. ಗ್ರಾಮಸ್ಥರ ಒಪ್ಪಿಗೆಯನ್ನು ಪಡೆದ ಮಹಿಳೆ ಎಂದರೆ ಮೆರಿಟ್ ಏಕೆ ಬೇಕು? ರೋಸ್ಟರ್ ಏಕೆಬೇಕು? ಗ್ರಾಮಸ್ಥರೆಲ್ಲರು ಸೇರಿ ಆಯ್ಕೆ ಮಾಡುತ್ತಾರೆ ಎಂಬ ಕಲ್ಪನೆ ಅವರಿಗೆ ಇದೆ. ಅದು ನಿಮಗೆ ಬಿಟ್ಟಿದ್ದು ಅದು ಪ್ರಾಕ್ಟಿಕಲ್ ಆಗಿ ಏನೆಂದು ಗೊತ್ತಾಗುತ್ತದೆ? ಗ್ರಾಮಸ್ಥರಿಂದ ಒಪ್ಪಿಗೆ ಪಡೆಯಬೇಕೆಂದು ಅರ್ಥವಾದರೆ ಮೆರಿಟ್ ಬೇಕಾಗಿಲ್ಲ, ರೋಸ್ಟರ್ ಬೇಕಾಗಿಲ್ಲ ಮತ್ತು ಕಮಿಟಿ ಬೇಕಾಗಿಲ್ಲ. ಏಕೆ ಬೇಕು? ಹೆಲ್ಪರ್‌ಗಾದರೂ ಅಷ್ಟೆ ಅಲ್ಲವೆ? ಯಾರಿಗಾದರೂ ಅಷ್ಟೆ ಅದು.

ಶ್ರೀ ಎಸ್. ಕುಮಾರ ಬಂಗಾರಪ್ಪ: ಗ್ರಾಮಸ್ಥರಲ್ಲಿ ಗುಂಪಾದರೆ ಏನು ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಗ್ರಾಮಸ್ಥರು ಅಂದರೆ ಏನು ಎಂಬ ಬಗ್ಗೆ ದಯವಿಟ್ಟು ಸ್ವಲ್ಪ ನಮಗೆ ಹೇಳಬೇಕು. ಗ್ರಾಮಸ್ಥರು ಅಂದರೆ ಎಷ್ಟು ಜನ? ಇಡೀ ಊರೇ ಅಥವಾ ಗ್ರಾಮದಲ್ಲಿ ಗೆದ್ದಿರತಕ್ಕಂಥ ಸದಸ್ಯರೆ? ಇದರಲ್ಲಿ ಏನೇನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರ ಪರಿಸ್ಥಿತಿ ಹೇಗಾಗಿದೆ ಎಂದರೆ, ಅವರು ಒಂದು ರೀತಿಯ ಪುಟ್‌ಬಾಲ್ ಇದ್ದಂತೆ. ಎಲ್ಲಾ ಇಲಾಖೆಗಳಿಗೂ ಕೆಲಸ ಮಾಡಬೇಕು. ಇಲ್ಲಿ ಒದ್ದರೆ ಅಲ್ಲಿ ಬೀಳಬೇಕು, ಅಲ್ಲಿ ಒದ್ದರೆ ಇಲ್ಲಿ ಬೀಳಬೇಕು. ಎಲ್ಲಾ ಇಲಾಖೆಯವರೂ ಅವರನ್ನು ಉಪಯೋಗಿಸಿಕೊಳ್ಳುತ್ತಾರೆ ಅದರ ಜೊತೆ ಇನ್ನೊಂದು ಸುತ್ತೋಲೆ ಇದೆ. ಅದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಲಿಲ್ಲ. ಗ್ರಾಮ ಪಂಚಾಯಿತಿಗೆ ವಹಿಸುತ್ತೇವೆಂದು ಹೇಳುತ್ತಾರೆ. ಅವರು ಒಂದು ರೀತಿಯಲ್ಲಿ ಇವರನ್ನು ಶೋಷಣೆ ಮಾಡುತ್ತಾರೆ. ಎಲ್ಲರೂ ಅವರನ್ನು ಶೋಷಣೆ ಮಾಡುತ್ತಾರೆ. ಆದರೆ ಅವರಿಗೆ ಸಂಬಳ ಕೊಡುವುದು ಮಾತ್ರ 1200. ಎಲ್ಲಾ ಇಲಾಖೆಯವರ ಕೆಲಸವನ್ನು ಅವರೆ ಮಾಡಬೇಕು. ಅವರು ಒಂದು ರೀತಿಯಲ್ಲಿ ಹೇಗಿದ್ದಾರೆಂದರೆ ಅನಾಥರು. ಯಾರು ದಿಕ್ಕಿಲ್ಲ ಅವರಿಗೆ. ಅವರು

ಒದ್ದರೆ ಅಲ್ಲಿ ಹೋಗುವುದು ಅಲ್ಲಿ ಹೋದರೆ ಇಲ್ಲಿಗೆ ಹೋಗುವುದು. ಮಂತ್ರಿಗಳ ಸಭೆಗೂ ಅವರನ್ನು ಕರೆದುಕೊಂಡು ಬರುವುದು. ಅಂಥ ಒಂದು ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ದಯವಿಟ್ಟು ಈ ಗೊಂದಲಗಳನ್ನು ನಿವಾರಣೆಮಾಡಿ. ನೀವು ಶಾಸಕರ ಅಧ್ಯಕ್ಷತೆಯಲ್ಲಿ ಅಲ್ಲಿ ಸಮಿತಿಗಳನ್ನು ಮಾಡುವುದಾಗಿದ್ದರೆ ನಮ್ಮನ್ನು ಅಲ್ಲಿಗೆ ಹಾಕಿ. ಇಲ್ಲದಿದ್ದರೆ ದಯವಿಟ್ಟು ನಮ್ಮನ್ನು ಅಲ್ಲಿಗೆ ಹಾಕಬೇಡಿ. ಯಾರ ಕೈಲಾದರು selection ಮಾಡಿಸಿಕೊಳ್ಳಿ. ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಮಹದೇವ: ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು: ಆಯಿತು ಅವರು ಸಿಗ್ನೇಟರೀಸ್, ಅವರು ಕ್ಲೊರಿಫಿ ಕೇಳಲಿಕ್ಕೆ ಅವಕಾಶವಿದೆ. ಸಿಗ್ನೇಟರಿ ಅಲ್ಲ. ನಿಮಗೆ ಅವಕಾಶ ಕೊಡಲು ಬರುವುದಿಲ್ಲ. ಕೆಟ್ಟ ಸಂಪ್ರದಾಯವಾಗಿ ಬಿಡುತ್ತದೆ. ನಿಜ, ನಿಮಗೂ ಆಸಕ್ತಿ ಇದೆ, ಅದು ಗಂಭೀರವಾದ ವಿಷಯ. ಇದೆಲ್ಲ ಇದ್ದರೂ ನಿಯಮಾವಳಿಯ ಪ್ರಕಾರ ಬೇರೆಯವರಿಗೆ ಅವಕಾಶ ಕೊಡಲು ಬರುವುದಿಲ್ಲ. ನೀವು ಒಂದು ನೋಟೀಸ್‌ನ್ನು ಕೊಡಿ.

ಶ್ರೀ ಮಹದೇವ: ನಮ್ಮಲ್ಲಿ 27 ಅಂಗನವಾಡಿಗಳಿಗೆ ಮೂರು ಸಾವಿರ ಅರ್ಜಿಗಳು ಬಂದಿದ್ದಾವೆ. ಒಂದು ಕಡೆ ನಮಗೆ ಏನು ಮಾಡುವುದಕ್ಕೆ ಡೈರೆಕ್ಟ್ ಪವರ್ಸ್ ಇಲ್ಲ. ಆದರೆ ಜನಸಾಮಾನ್ಯರು ಎಂ.ಎಲ್.ಎ. ಹತ್ತಿರ ಹೋದರೆ ಕೆಲಸವಾಗುತ್ತದೆಂದು ಹೇಳುತ್ತಾರೆ. ಇದು ಎಂ.ಎಲ್.ಎ. ಗಳ ತಲೆಯ ಮೇಲೆ ಬರುತ್ತದೆ. ಈ ಇಡೀ ವ್ಯವಸ್ಥೆಯಲ್ಲಿ ಎಲ್ಲಾ ಶಾಸಕರಿಗೂ ಕೆಟ್ಟ ಹೆಸರು ಬರತಕ್ಕ ಕೆಲಸವಾಗುತ್ತದೆ.

ಅಧ್ಯಕ್ಷರು: ಎಲ್ಲಾ ಕೆಲಸಕ್ಕೂ ತಾಲ್ಲೂಕಿನ ಜನರು ಎಂ.ಎಲ್.ಎ ಹತ್ತಿರವೆ ಬರುವುದದು. ನಿಮಗೆ ಅಧಿಕಾರ ಇದೆಯೊ ಇಲ್ಲವೋ.....

ಶ್ರೀ ಮಹದೇವ: ಕೊಡುತ್ತಿರುವುದು ಗೌರವಧನ. ಆದರೆ ಅಲ್ಲಿ ಟ್ರಾನ್ಸ್‌ಫರ್ ಪಾಲಿಸಿಯನ್ನು ಹಾಕುತ್ತೀರಿ. ಎಸ್.ಸಿ., ಎಸ್.ಟಿ.ಯವರನ್ನು ನೇಮಕ ಮಾಡಿ ಎಂದು ಹೇಳುತ್ತೀರಿ. ಎಸ್.ಸಿ., ಎಸ್.ಟಿ. ಯವರನ್ನು ಯಾವ ಊರಿನಲ್ಲಿ ಮಾಡಲಿ? ಯಾವ ಊರಿನಿಂದ ಪ್ರಾರಂಭ ಮಾಡಲಿ? ನಿಮ್ಮ ಗೈಡ್‌ಲೈನ್ಸ್ ಇಲ್ಲದೆಯೇ ನಾನು ಯಾವುದೋ ಊರಿನಲ್ಲಿ ಎಸ್.ಸಿ., ಎಸ್.ಟಿ. ಹಾಕಿದರೆ ನೋಡಿ ಎಂ.ಎಲ್.ಎ. ಗೆ ಯಾರು ಆಗುವುದಿಲ್ಲ ಅಲ್ಲಿಗೆ ಎಸ್.ಸಿ., ಎಸ್.ಟಿ. ಯವರನ್ನು ಹಾಕಿದ ಎಂದು ಹೇಳುತ್ತಾರೆ. ಒಟ್ಟಾರೆ ಇದರ ಇಡೀ ಪ್ರಕ್ರಿಯೆ ಮುಗಿದು ರೆಕ್ರೂಟ್‌ಮೆಂಟ್ ಆಗುವ ಹೊತ್ತಿಗೆ ನಾವೆಲ್ಲರೂ ಬೈಸಿಕೊಂಡು ಇಲ್ಲಿಗೆ

ಬರಬೇಕಷ್ಟೆ. ಗೌರವಧನವನ್ನು ಕೊಡುವ ವಿಚಾರದಲ್ಲಿ ಬಂದಾಗ ಅವರಿಗೆ ಟ್ರಾನ್ಸ್‌ಫರ್ ಹೇಗೆ ಅಪ್ಲೈಯಾಗುತ್ತದೆ?

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಬೇರೆಯವರಿಗೆ ಅವಕಾಶ ಇಲ್ಲ. ಆ ರೀತಿಯಾದರೆ ಚರ್ಚೆಯಾಗುತ್ತದೆಯೆ ?

(ಗೊಂದಲ)

ಶ್ರೀ ಹೆಚ್. ಆಂಜನೇಯ: ನೀವು ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಆರಂಭ ಮಾಡಿದ್ದೀರಿ, ಇದು ಸರಿಯಲ್ಲ.

ಶ್ರೀ ಹೆಚ್. ಆಂಜನೇಯ: ಒಂದೇ ನಿಮಿಷ.

ಅಧ್ಯಕ್ಷರು: ಇಲ್ಲಿ ನಿಮಿಷದ ಪ್ರಶ್ನೆಯಲ್ಲ. ಪ್ರತಿಯೊಂದು ವಿಚಾರಕ್ಕೂ ಪ್ರತಿಯೊಬ್ಬರು ಸಹ ಸಂಪ್ರದಾಯವನ್ನು ಉಲ್ಲಂಘಿಸಿ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವುದನ್ನು ಮಾಡುತ್ತಾರೆ. ಅದರಿಂದ ಪ್ರಯೋಜನವೇನು? ಈ ರೀತಿಯಾದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಆಂಜನೇಯ: ಇದು ಪ್ರಮುಖವಾದ ವಿಷಯ ಸ್ವಾಮಿ.

ಅಧ್ಯಕ್ಷರು: ಈ ತರಹ ಆದರೆ ಸದನ ನಡೆಸಲು ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಬಹಳ ಮಹತ್ವವಾದ ವಿಚಾರವನ್ನು ಮಾನ್ಯ ಮೂರು ಜನ ಸದಸ್ಯರುಗಳು ನಿಯಮ 73ರ ಕೆಳಗೆ ಗಮನ ಸೆಳೆಯುವ ನೋಟೀಸನ್ನು ಕೊಟ್ಟಿದ್ದಾರೆ. ನಾನು ತಾಂತ್ರಿಕವಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆಂದು ಅನೇಕ ಜನ ಸದಸ್ಯರುಗಳನ್ನು ಅಂದುಕೊಳ್ಳಬಾರದು. ಏಕೆಂದರೆ ಇಂಥ ವಿಚಾರದಲ್ಲಿ ನಾವೇ ನಿಯಮಾವಳಿಗಳನ್ನು ರಚನೆ ಮಾಡಿರುತ್ತೇವೆ. ಆ ನಿಯಮಾವಳಿಗಳನ್ನು ಮೀರಿ ಕೂಡ ಕೆಲಸ ಮಾಡತಕ್ಕ ಹಕ್ಕು ಸದನಕ್ಕೆ ಇರುತ್ತದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಇಲ್ಲಿ ಒಂದು ಚರ್ಚೆಗೆ ಇದು ಅವಕಾಶ ಕೊಡತಕ್ಕದ್ದಲ್ಲ. ಇಲ್ಲಿ ನಿಯಮ 73(2)ರ ಕೆಳಗೆ ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂಥ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನು ಮಾಡತಕ್ಕದಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿದೆಯೋ ಪ್ರತಿಯೊಬ್ಬ ಸದಸ್ಯರು ವಿಧಾನ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೇಳಬಹುದು. ಅದೇ ರೀತಿಯಾಗಿ ಸೂಚನೆಗೆ ಒಬ್ಬರಿಗಿಂತ ಹೆಚ್ಚು ಮಂದಿ ಸಹಿ ಮಾಡಿದ್ದಲ್ಲಿ ಮೊದಲು ಸಹಿ ಮಾಡಿದವರೆ ಅದನ್ನು ನೀಡಿದ್ದಾರೆಂದು ಭಾವಿಸತಕ್ಕದ್ದು. ಈ ಹಿನ್ನೆಲೆಯಲ್ಲಿ ಈವತ್ತು ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಬಹಳ ಮುಖ್ಯವಾದಂಥ ವಿಷಯವನ್ನು ಎಲ್ಲರು ಪ್ರಸ್ತಾಪ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಈ

ನಿಯಮಾವಳಿಗಳಿಗೆ ಜೋತುಬೀಳಬೇಕು ಎಂಬ ಪ್ರಶ್ನೆಯಲ್ಲ. ಮಾನ್ಯ ಶಾಸಕರು... ಅನೇಕ ಬಾರಿ ಇಂಥ ವಿಚಾರಗಳ ಬಗ್ಗೆ ನಮ್ಮಲ್ಲಿ ಕೂಡ ಮಾನಸಿಕವಾದ ಕೆಲವು ಗೊಂದಲಗಳು ಇದೆ. ನಾವು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಸಂಪೂರ್ಣವಾದ ಬದ್ಧತೆಯನ್ನು ಇಟ್ಟುಕೊಳ್ಳುವುದಾದರೆ ಆಗ ಶಾಸಕರ ಪಾತ್ರ ಏನು ಎನ್ನತಕ್ಕ ಪ್ರಶ್ನೆ ಇದೆ. ಶಾಸಕರಾಗಿ ಬಂದಿರುವ ಎಲ್ಲರಿಗೂ ತೊಂದರೆ ಇರತಕ್ಕದ್ದು ಏನೆಂದರೆ ಜನಸಾಮಾನ್ಯ ಮಾನಸಿಕವಾಗಿ ಎಲ್ಲದಕ್ಕೂ ಶಾಸಕರೆ ಜವಾಬ್ದಾರ ಎಂದು ಭಾವಿಸಿದ್ದಾನೆ. ಆತ ಯಾವುದೇ ಕೆಳಹಂತದ ಪ್ರಜಾಪ್ರಭುತ್ವದ ಅಧಿಕಾರ ಏನಿದೆ, ಅದು ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಆ ಅಧಿಕಾರದ ವ್ಯಾಪ್ತಿಯನ್ನು ಕೂಡ ಆತ ಪರಿಗಣಿಸುವುದಿಲ್ಲ. ಸಣ್ಣ ವಿಷಯಗಳಾಗಿದ್ದರೂ ಕೂಡ ಶಾಸಕನೆ ಜವಾಬ್ದಾರಿಯುತನಾಗಿರಬೇಕೆಂದು ಭಾವಿಸುತ್ತಾನೆ. ಆ ಕಾರಣಕ್ಕಾಗಿ ನಮ್ಮಲ್ಲಿ ಗೊಂದಲವಿದೆ. ನಾವು ಆ ತರಹದಲ್ಲಿ ಎಲ್ಲದಕ್ಕೂ ಶಾಸಕರನ್ನೆ ಮಾಡುತ್ತೇವೆ ಎನ್ನುವುದಾದರೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಾವು ಬಹಳ ಮುಂದಿರುವ ರಾಜ್ಯ ಸರ್ಕಾರವೆಂದು ಹೆಗ್ಗಳಿಕೆಯನ್ನು ಹೇಳಿಕೊಳ್ಳಲು ಆಗುವುದಿಲ್ಲ. ಮತ್ತು ಅಂತಹ ಕಾನೂನಿನ ಕೆಳಗೆ ಕೆಲಸ ಮಾಡತಕ್ಕದ್ದು ಕಷ್ಟವಿದೆ. ಆದರೆ ಒಂದು ಮಾತನ್ನು ಎಲ್ಲ ಶಾಸಕರು ಹೇಳಿರತಕ್ಕದ್ದು ಒಬ್ಬ ಅಧಿಕಾರಿ ಕೆಳಗೆ ಎಂದರೆ, ಅಧಿಕಾರಿಗಳೂ ಉತ್ತಮರೆ ಮತ್ತು ಅಧಿಕಾರದ ವ್ಯಾಪ್ತಿಯ ಕೆಳಗೆ ಅವರು ಕೆಲಸ ಮಾಡುತ್ತಾರೆ. ಆದರೆ ಜನಪ್ರತಿನಿಧಿಯಾಗಿರತಕ್ಕವರು ಅಲ್ಲಿ ನಾವು ಕೇವಲ ಸದಸ್ಯರಾಗಿರಬೇಕೇ ಎಂಬ ಮೂಲಭೂತವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಆದ್ದರಿಂದ ಅವರು ಅಧ್ಯಕ್ಷರಾಗಿ ಕೆಲಸ ಮಾಡಬೇಕು ಎನ್ನುವಂತಹ ವಿಚಾರವೇನಿದೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಿಕೊಡುತ್ತೇನೆ. ಈಗಲಾದರೂ ಕೂಡ ಮಾನ್ಯ ಉದಾಸಿಯವರು ಇಂಥ ಅನೇಕ ವಿಚಾರಗಳನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಬೇರೆಯವರು ಹಿಂದಿನ ಸಭೆಗಳಲ್ಲಿ ಎತ್ತಿರತಕ್ಕ ವಿಚಾರಗಳಲ್ಲಿ ಒಂದು ರಾಜೀ ಸೂತ್ರವನ್ನು ಮಾಡಿ ಟಾಸ್ಕ್‌ಫೋರ್ಸ್ ಮಾಡಿದೆವು, ವಿಜಲೆನ್ಸ್ ಕಮಿಟಿ ಎಂದು ಮಾಡಿದೆವು. ಹಾಗೆ ಇದರಲ್ಲಿ ಏನು ವ್ಯವಸ್ಥೆ ಮಾಡಲು ಸಾಧ್ಯತೆ ಇದೆಯೋ ನೋಡೋಣ. ಎರಡನೆಯದು ಬಹಳ ಮುಖ್ಯವಾಗಿರತಕ್ಕದ್ದು ಅವರಿಗೆ ಆಯ್ಕೆ ಸಮಿತಿ ಎಂದು ಸಂಪೂರ್ಣವಾಗಿ ಅವರ ಅರ್ಹತೆಯ ಆಧಾರದ ಮೇಲೆ ಮಾಡುವುದಾಗಿದ್ದರೆ

ಆಯ್ಕೆ ಸಮಿತಿ ಇರತಕ್ಕದ್ದು ಕೇವಲ ಅವರ ದಾಖಲಾತಿಗಳು ಸರಿಯಾಗಿ ಇದ್ದಾವೋ ಇಲ್ಲವೋ ಅಷ್ಟನ್ನೆ ಮಾತ್ರ ಪರಿಶೀಲಿಸಬೇಕಾಗುತ್ತದೆ.

ಆ ಕಾರಣ ಇರುವುದರಿಂದ ಒಬ್ಬ ಸದಸ್ಯರು ನಾವು ಕುಳಿತುಕೊಂಡು ಆ ಕೆಲಸ ಮಾಡತಕ್ಕದ್ದಲ್ಲ. ಯಾರಾದರೂ ಅಧಿಕಾರಿ ಮಾಡಬಹುದು ಅನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಕೇಂದ್ರ ಸರ್ಕಾರ ಈ ತರಹದ 5–6 ಸುತ್ತೋಲೆಗಳನ್ನು ಇಂತಹ ಸಣ್ಣ ನೇಮಕಾತಿ ವಿಚಾರದಲ್ಲಿ ಕೊಡಬೇಕಾಗಿರತಕ್ಕಂಥ ಅಗತ್ಯತೆ ಇದ್ದಿಲ್ಲ. ಆದರೆ ಕಾಲಕಾಲಕ್ಕೆ ಬಂದಿರತಕ್ಕಂಥ ಪ್ರತಿಕ್ರಿಯೆ ಆಧಾರದ ಮೇಲೆ ಸುತ್ತೋಲೆಗಳು ಬಂದಿವೆ. ಸುತ್ತೋಲೆಗಳು ಸ್ಪಷ್ಟೀಕರಣ ಆಗುವುದಕ್ಕಿಂತ ಹೆಚ್ಚು ಗೊಂದಲವನ್ನು ಸೃಷ್ಟಿ ಮಾಡಿದೆ. ಏಕೆಂದರೆ ಸಮಸ್ಯೆಯೇ ಆ ತರಹದಲ್ಲಿ ಇದೆ. ಈಗ ಉದಾಹರಣೆಗೆ, ಅಂಗನವಾಡಿ ಕಾರ್ಯಕರ್ತೆಯರಾಗಲು ಸ್ಥಳೀಯರಿಗೆ ಅವಕಾಶವನ್ನು ಕೊಡಬೇಕು ಎಂದು ನಿರ್ಧಾರ ಮಾಡಿದರೆ, ಮುಂದೆ ಆ ಹುಡುಗಿ ಮದುವೆಯಾಗಿ ಇನ್ನೊಂದು ಊರಿಗೆ ಹೋಗುತ್ತಾಳೆ. ಮದುವೆಯಾಗಿ ಇನ್ನೊಂದು ಊರಿಗೆ ಹೋದಂತಹ ಸಂದರ್ಭಗಳಲ್ಲಿ ನಮ್ಮನ್ನು ದಯವಿಟ್ಟು ಪತಿ ಇರುವ ಜಾಗಕ್ಕೇ ವರ್ಗಾಯಿಸಿ ಎನ್ನುತ್ತಾರೆ. ಈಗ ನಾವು ವರ್ಗಾವಣೆ ವಿಚಾರ ಬಂದಾಗ ಅವರು ಪತಿ–ಪತ್ನಿ ಆಗಿದ್ದರೆ ಅದನ್ನೂ ಕೂಡ ಪರಿಗಣಿಸಬಹುದು ಎಂದು ಹೇಳುತ್ತೇವೆ. ತೀರಾ ಗೌರವಧನ ತೆಗೆದುಕೊಳ್ಳತಕ್ಕಂತ, ಕಡಿಮೆ [illegible]ಬಳದಲ್ಲಿ ಇರತಕ್ಕಂಥ, ಬಡತನ ಸೀಮಾ ರೇಖೆಯಿಂದ ಕೆಳಗೆ ಇರತಕ್ಕಂಥ ಜನಗಳನ್ನು ನಾವು ಆಯ್ಕೆ ಮಾಡಿದಂತಹ ಸಂದರ್ಭಗಳಲ್ಲಿ ಅವರ ದಾಂಪತ್ಯ ಜೀವನ ಸುಖವಾಗಲಿ ಎನ್ನುವ ಕಾರಣಕ್ಕಾಗಿಯೂ ಕೂಡ ನಾವು ಅವರನ್ನು ವರ್ಗಾವಣೆ ಮಾಡಬೇಕಾದಂತಹ ಅನಿವಾರ್ಯತೆ ಉಂಟಾಗುತ್ತದೆ. ಆದರೆ ಅಲ್ಲಿ ಶಾಸಕರಾಗಿರುವವರು ಅಥವಾ ಊರಿನವರೆಲ್ಲಾ ಏನು ಹೇಳುತ್ತಾರೆ, ನೀವು ಯಾರನ್ನಾದರೂ ಆ ಸ್ಥಳಕ್ಕೆ ವರ್ಗಾವಣೆ ಮಾಡಿದರೆ ಆ ಊರಿನಲ್ಲಿ ಇನ್ನೊಬ್ಬರು ಅಭ್ಯರ್ಥಿಗಳು ಏನು ಇರುತ್ತಾರೋ, ಅವರು ಆಯ್ಕೆಯಾಗುವುದಿಲ್ಲ, ಯಾವುದೋ ಬಳ್ಳಾರಿ ಜಿಲ್ಲೆಯಲ್ಲಿ ಇರತಕ್ಕಂಥವರನ್ನು ಕೊಪ್ಪಳ ಜಿಲ್ಲೆಗೆ ಕಳುಹಿಸಿಕೊಟ್ಟೆವು ಎಂದರೆ, ಕೊಪ್ಪಳ ಜಿಲ್ಲೆಯಲ್ಲಿ ಇರತಕ್ಕಂಥ ಒಬ್ಬ ಅಂಗನವಾಡಿ ಕಾರ್ಯಕರ್ತೆಗೆ, ಅರ್ಹತೆ ಇರತಕ್ಕಂಥ ಒಬ್ಬ ಮಹಿಳೆ ಅವಕಾಶದಿಂದ ವಂಚಿತಳಾಗುತ್ತಾಳೆ. ಆದ್ದರಿಂದ ಮಾಡಬೇಡಿ ಎಂದು ಹೇಳುತ್ತಾರೆ. ಈ ಎಲ್ಲಾ ಗೊಂದಲ ಇರುವುದರಿಂದ ಸ್ಪಷ್ಟೀಕರಣವನ್ನು ಕಾಲಕಾಲಕ್ಕೆ ಕೊಟ್ಟಿದ್ದಾರೆ. ನೀವು ಹೇಳಿದಂತೆ ಸ್ಥಾನ ಪಲ್ಲಟ ಮಾಡಬೇಕು ಎನ್ನುವುದನ್ನು ಮಾನವೀಯ

ದೃಷ್ಟಿಕೋನದಿಂದ ನಾವು ಒಪ್ಪಲೇಬೇಕಾಗುತ್ತದೆ. ಯಾವುದೋ ಕೆಲವು ಸಂದರ್ಭಗಳು ಇರುತ್ತವೆ. ಕೆಲವು ಸಂದರ್ಭದಲ್ಲಿ ಕುಟುಂಬ ಯಾವುದೋ ಒಂದು ವ್ಯವಹಾರದಲ್ಲಿ ನಷ್ಟವನ್ನು ಅನುಭವಿಸುತ್ತದೆ ಅಥವಾ ಅಲ್ಲಿ ಬದುಕಲಿಕ್ಕೆ ಅವಕಾಶ ವಾತಾವರಣ ಸೃಷ್ಟಿಯಾಗಿರುತ್ತದೆ. ಅಂತಹ ಒಂದು ಸಂದರ್ಭ ಬಂದಾಗ ಇಡೀ ಕುಟುಂಬವೇ ಸ್ಥಳಾಂತರಗೊಂಡು ಬೇರೆ ಕಡೆಗೆ ಹೋಗುತ್ತದೆ. ಹೋದಾಗ ಆ ಮಗು ಕೂಡ ಅಲ್ಲಿ ಕೆಲಸ ಮಾಡಲಿ ಅನ್ನತಕ್ಕಂಥ ಅಭಿಲಾಷೆ ಸಹಜವಾಗಿ ಇರುತ್ತದೆ. ಈ ಕಾರಣಕ್ಕಾಗಿಯೇ ಮಾನವೀಯ ದೃಷ್ಟಿಕೋನದಿಂದ ವರ್ಗಾವಣೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. 40301ರಷ್ಟು ಅಂಗನವಾಡಿಗಳಲ್ಲಿ ನಮ್ಮನ್ನು ಸ್ಥಾನ ಪಲ್ಲಟ ಮಾಡಿ ಕೊಡಿ ಎಂದು ಕೇವಲ 500 ಅರ್ಜಿಗಳು ಮಾತ್ರ ಪ್ರಧಾನ ಕಛೇರಿಗೆ ಬಂದಿವೆ. ಆದುದರಿಂದ ಮೊದಲು ಸ್ಥಾನ ಪಲ್ಲಟ ಮಾಡಿ, ಲಭ್ಯವಾಗಿರತಕ್ಕಂಥ ಸ್ಥಾನಗಳು ಎಷ್ಟು ಅನ್ನತಕ್ಕಂಥದ್ದನ್ನು ಹೇಳಿದರೆ ಆಯ್ಕೆ ಸಮಿತಿ ಅದನ್ನು ಆಯ್ಕೆ ಮಾಡಿಕೊಳ್ಳಲಿಕ್ಕೆ ಸಾಧ್ಯತೆ ಆಗುತ್ತದೆ. ಆದುದರಿಂದ ನಾನು ಮಾನ್ಯ ಶಾಸಕರು ಕೊಟ್ಟಂತಹ ಸಲಹೆಯನ್ನು ಸ್ವೀಕಾರ ಮಾಡುತ್ತೇನೆ. ಮೊದಲು ಸ್ಥಾನ ಪಲ್ಲಟ ಆಗತಕ್ಕಂಥದ್ದರ ಬಗ್ಗೆ ನಿರ್ಣಯವಾಗಲಿ. ಅಷ್ಟನ್ನು ನಾವು ಅದರಲ್ಲಿ ಕಡಿಮೆ ಮಾಡತಕ್ಕಂಥದ್ದು ಆಗಬೇಕು. ಎರಡನೆಯದಾಗಿ, ಬಹಳ ಮುಖ್ಯವಾಗಿರತಕ್ಕಂಥದ್ದು, ಅವರು ಹೇಳತಕ್ಕಂಥ ಮಾತಿನಲ್ಲಿಯೇ ಇದೆ. ಅವರಿಗೆ ಗೌರವ ಧನ ಇಲ್ಲ, ಮಾನ್ಯ ಶ್ರೀರಾಮರೆಡ್ಡಿಯವರು ಇದರ ಬಗ್ಗೆ ಹೋರಾಟ ಮಾಡುತ್ತಾರೆ. ಅವರ ಪಕ್ಷದ ನೀತಿಯೂ ಕೂಡ ಅದೇ ಆಗಿದೆ. ಅವರ ಪಕ್ಷದ ನೀತಿಯಲ್ಲಿ ಹೇಗೆ ಇರುತ್ತದೆ ಎಂದರೆ ಸಂಘಟಿತರಾಗದೆ ಇರತಕ್ಕಂಥ ಕಾರ್ಯಕರ್ತರನ್ನು ಅವರು ಬಲು ಬೇಗನೆ ಸಂಘಟನೆ ಮಾಡುತ್ತಾರೆ. ಈಗ ಬಿಸಿಯೂಟ ಕಾರ್ಯಕ್ರಮದಲ್ಲಿ ಅಡಿಗೆಯವರನ್ನು ನೇಮಕ ಮಾಡಿದೆವು. ನಾವು ಈಗ ಆಯವ್ಯಯದಲ್ಲಿ ಹೇಳಿದಂತೆ ಹೆಚ್ಚುವರಿಯಾಗಿ ಒಂದೂವರೆ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಒಂದೂವರೆ ರೂಪಾಯಿ ಕೊಡತಕ್ಕಂಥದ್ದರಲ್ಲಿ ಬಿಸಿಯೂಟದ ಕಾರ್ಯಕ್ರಮ ಸಮರ್ಪಕವಾಗಿ ನಡೆಸಲಾಗುತ್ತಿಲ್ಲ ಹಾಗೂ ಒಳ್ಳೆಯ ಪೌಷ್ಟಿಕವಾದ ಆಹಾರವನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಅನ್ನತಕ್ಕಂಥ ಪ್ರಶ್ನೆ ಇದ್ದಾಗ, ಅಡಿಗೆಯವರೆಲ್ಲರನ್ನೂ ಸರ್ಕಾರಿ ನೌಕರರು ಎಂದು ಪರಿಗಣಿಸಬೇಕು, ಅವರಿಗೆ ಸರ್ಕಾರಿ ನೌಕರರ ಕನಿಷ್ಠ ವೇತನವನ್ನು ಕೊಡಬೇಕು ಎಂದು ಕೇಳಲಾಗುತ್ತಿದೆ. ಅದು ನ್ಯಾಯವಾದ ಹೋರಾಟ, ಅವರು ಮಾಡಲಿ. ಅದು ಅರ ಪಕ್ಷದ ನೀತಿ

ನಮ್ಮದೂ ಅದೇ ನೀತಿ ಆಗಿರುತ್ತದೆ. ಏಕೆಂದರೆ, Government is a model employer ಎಂಬ ಮಾತನ್ನು ನಾವು ಬಳಸುತ್ತೇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನಮ್ಮಲ್ಲಿ ಇರತಕ್ಕಂಥ ಸಂಪನ್ಮೂಲ ಲಭ್ಯತೆ ಎಷ್ಟು? ಆ ರೀತಿ ದಿನಗೂಲಿ ಆಗಿರತಕ್ಕವರೆಲ್ಲರನ್ನೂ ಕೂಡ ಖಾಯಂ ನೇಮಕಾತಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈಗಾಗಲೇ ನಮ್ಮ ಆದಾಯದಲ್ಲಿ ಶೇಕಡ 47ಕ್ಕಿಂತಲೂ ಹೆಚ್ಚಿನ ಹಣವನ್ನು ಈ ರೀತಿ ಆಗಿಯ ನೌಕರರುಗಳಿಗೆ ಖರ್ಚು ಮಾಡುತ್ತಿರುವಾಗ, ಮೂಲವಾಗಿರತಕ್ಕಂಥ ವಿಷಯದ ಕಡೆಗೆ ಖರ್ಚು ಮಾಡಲಿಕ್ಕೆ ಸಾಧ್ಯತೆ ಇರುವುದಿಲ್ಲ ಎನ್ನುವ ಕಾರಣಕ್ಕಾಗಿಯೇ, ಪ್ರಗತಿಯಾದಂತೆ, ಸಂಪನ್ಮೂಲಗಳು ಹೆಚ್ಚಾದಂತೆ, ಅವರಿಗೂ ಕೂಡ ಒಂದು ಗೌರವಯುತವಾದಂತಹ ಬದುಕನ್ನು ಬದುಕಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎನ್ನುವುದಕ್ಕೆ ಸಂಪೂರ್ಣವಾದಂತಹ ಸಹಮತ ಇದೆ. ಆ ಕಾರಣಕ್ಕೆ ಇವರನ್ನು ನೇಮಕಾತಿ ಮಾಡಿಕೊಳ್ಳುವುದಾದರೆ, ಒಂದು ಪ್ರಶ್ನೆ ಏನು ಬರುತ್ತದೆ, ಇದು ಕೇಂದ್ರ ಸರ್ಕಾರದ ಯೋಜನೆ. ಮಾನ್ಯ ಆಂಜನೇಯರವರು ಹೇಳಿದರು, ಮಾನ್ಯ ಮಹದೇವ್‌ರವರು ಹೇಳಿದರು, ಇದು ಕೇಂದ್ರ ಸರ್ಕಾರದ ಯೋಜನೆ. ಇದೊಂದು ತಾತ್ಕಾಲಿಕವಾದಂತಹ ಯೋಜನೆಯನ್ನು ಅವರು ರೂಪಿಸಿ, ರಾಜ್ಯ ಸರ್ಕಾರ ಅದನ್ನು ಅನುಷ್ಠಾನ ಮಾಡಲಿಕ್ಕೆ ಅವರು ಸಹಾಯಧನವನ್ನು ಅವರು ರೂಪಿಸಿ, ರಾಜ್ಯ ಸರ್ಕಾರ ಅದನ್ನು ಅನುಷ್ಠಾನ ಮಾಡಲಿಕ್ಕೆ ಅವರು ಸಹಾಯಧನವನ್ನು ಅವರು ರೂಪಿಸಿ, ರಾಜ್ಯ ಸರ್ಕಾರ ಅದನ್ನು ಅನುಷ್ಠಾನ ಮಾಡಲಿಕ್ಕೆ ಅವರು ಸಹಾಯಧನವನ್ನು ಕೊಡುತ್ತಾರೆ. ಇವರನ್ನು ನಾವು ಖಾಯಂಗೊಳಿಸಿದರೆ ಈ ಯೋಜನೆಯನ್ನು ನಾಳೆ ಕೇಂದ್ರ ಸರ್ಕಾರ ರದ್ದು ಮಾಡಿದರೆ, ಆಗ ಈ ಕೆಲಸ ಮಾಡುತ್ತಿರುವವರನ್ನು ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಲಿಕ್ಕೆ ಆಗುತ್ತದೆ. ಹಿಂದೆ ಗ್ರಾಮ ಪಂಚಾಯಿತಿಗಳಲ್ಲಿ ಬಾಲ ವಿಕಾಸ ಶಿಶುವಿಹಾರಗಳು ಇದ್ದವು. ಅವರಿಗೆ 100–150 ರೂಪಾಯಿಗಳ ಸಂಬಳದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಸರ್ವ ಶಿಕ್ಷಣ ಅಭಿಯಾನದಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳು, pre-nursery ಶಾಲೆಗಳು ಎಂದು ಮಾಡಿದ್ದರು. ಈಗ ಅದನ್ನು ಕೇಂದ್ರ ಸರ್ಕಾರ ರದ್ದು ಮಾಡಿದೆ. ಸರ್ವ ಶಿಕ್ಷಣ ಅಭಿಯಾನದಲ್ಲಿ ಪ್ರಾರಂಭ ಮಾಡಿರತಕ್ಕಂಥ ಪೂರ್ವ ಪ್ರಾಥಮಿಕ ಶಾಲೆಗಳು ಏನಿವೆ, ಅದನ್ನು ರದ್ದು ಮಾಡಿ, ಅವರನ್ನೇ ಅಂಗನವಾಡಿ ಕಾರ್ಯಕರ್ತರನ್ನಾಗಿ ಪರಿವರ್ತಿಸಿಕೊಳ್ಳಿ ಎಂದು ಕೇಂದ್ರ ಹೇಳಿತ್ತು. ನಾಳೆ ಈ

ಯೋಜನೆ ಅಗತ್ಯತೆ ಇಲ್ಲ. ಈ ಯೋಜನೆಗೆ ನಾವು ಈಗ ಆದ್ಯತೆಯನ್ನು ಕೊಡುವುದಿಲ್ಲ, ಅದನ್ನು ಈಗ ರದ್ದು ಮಾಡಿದ್ದೇವೆ ಎಂದಾಗ ಅವರ ಪರಿಸ್ಥಿತಿ ಏನಾಗುತ್ತದೆ? ನಾವೂ ಕೂಡ ಈ ಬಗ್ಗೆ ಒತ್ತಾಯ ಮಾಡಿದ್ದೇವೆ. 20–25 ವರ್ಷಗಳಿಂದ ಕೆಲಸ ಮಾಡುತ್ತಿರತಕ್ಕಂಥವರನ್ನು ನಾವು ಖಾಯಂಗೊಳಿಸಬೇಕು. ನಿಜ, ಆ ಯೋಜನೆ ಖಾಯಂ ಆಗಿರತಕ್ಕಂಥ ಯೋಜನೆಯಾದರೆ, ಖಂಡಿತವಾಗಿಯೂ ಕೂಡ ರಾಜ್ಯ ಸರ್ಕಾರ ಅದರ ಬಗ್ಗೆ ಮುಂದಿನ ಕ್ರಮ ಜರುಗಿಸಬಹುದು. ಮಾನ್ಯ ಶ್ರೀರಾಮರೆಡ್ಡಿಯವರ ಪಕ್ಷವೇ ಅಧಿಕಾರದಲ್ಲಿ ಇರತಕ್ಕಂಥ ಪಶ್ಚಿಮ ಬಂಗಾಳದಲ್ಲಿ ಇವತ್ತಿಗೂ ಕಾರ್ಯಕರ್ತರು ಆಗಿರತಕ್ಕಂಥವರು, ಅವರೂ ಕೂಡ ಹಂಗಾಮಿ ಆಗಿರತಕ್ಕಂಥ ಶಿಕ್ಷಕರಾಗಿದ್ದಾರೆ. ಅಲ್ಲಿ ಅಸೀಂ ಗುಪ್ತಾ ಅನ್ನತಕ್ಕಂಥ ಒಳ್ಳೆಯ ಹಣಕಾಸಿನ ಸಚಿವರು ಇದ್ದಾರೆ. ಇಲ್ಲಿ ಇದ್ದಂತಹ ತೊಂದರೆಗಳೇನು ಅವರಿಗೆ ಇಲ್ಲ. ಮಾನ್ಯ ವಾಜಪೇಯಿಯವರೇ ಇವರನ್ನು ಶ್ಲಾಘಿಸಿದ್ದಾರೆ, ನೋಡಿ ಅವರಿಂದ ನೀವು ಪಾಠ ಕಲಿಯಬೇಕು ಎಂದು ಹೇಳಿದ್ದಾರೆ. ಅಂತಹ ರೀತಿಯ ಒಂದು ಉತ್ತಮ ಹಣಕಾಸಿನ ನಿರ್ವಹಣೆ ಮಾಡತಕ್ಕಂಥ ಪಶ್ಚಿಮ ಬಂಗಾಳದಲ್ಲಿ ಅವರನ್ನು ಖಾಯಂಗೊಳಿಸಲಿಕ್ಕೆ ಸಾಧ್ಯವಾಗಿಲ್ಲದೇ ಇರುವುದರಿಂದ, ನಾವು ಖಾಯಂಗೊಳಿಸತಕ್ಕ ಮಟ್ಟಕ್ಕೆ ಇಲ್ಲಿಯವರೆಗೂ ಕೂಡ ಬಂದಿಲ್ಲ. ಆದರೆ ತಾವು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಈ ಉತ್ತರದಲ್ಲಿ ಏನೇ ಇರಲಿ, ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣವೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು, ಇದರಲ್ಲಿ ಏನಾದರೂ ಬದಲಾವಣೆಗಳನ್ನು ಮಾಡತಕ್ಕಂಥದ್ದಕ್ಕೆ ಏನಿದೆ, ಅದಕ್ಕೆ ಖಂಡಿತವಾಗಿಯೂ ಗಮನವನ್ನು ಕೊಟ್ಟು, ನಿಮ್ಮ ಸಲಹೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಅದನ್ನು ಜಾರಿಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಎರಡು ವಿಷಯಗಳ ಬಗ್ಗೆ ಮಾನ್ಯ ಸಚಿವರಿಂದ ಕ್ಲಾರಿಫಿಕೇಷನ್ ಬರಲೇ ಇಲ್ಲ. ಜಿಲ್ಲಾ ಪಂಚಾಯಿತಿಯವರು ಸ್ಥಾನ ಪಲ್ಲಟ ಮಾಡಬೇಡಿ. ಡೈರೆಕ್ಟ್ ರಿಕ್ರೂಟ್ ಮಾಡಿ ಎಂದು ಒಂದು ಸರ್ಕ್ಯೂಲರ್ ಕೊಟ್ಟು, ನೋಟಿಫಿಕೇಷನ್ ಮಾಡಿಸಿದ್ದಾರೆ. ನೀವು ಸ್ಥಾನ ಪಲ್ಲಟ ಮಾಡಿ ಎಂದು ಹೇಳಿದ್ದೀರಿ. ನಮ್ಮ ಪಾಯಿಂಟ್‌ಗೆ ನಿಮ್ಮಿಂದ ಉತ್ತರ ಸಿಗಲಿಲ್ಲ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಈಗ ನಮಗೆ ಗೊಂದಲವಾಗಿದೆ. ಸ್ಥಾನ ಪಲ್ಲಟ ಮಾಡಬೇಕು ಎಂದು ಡೈರೆಕ್ಟರ್ ಆಫೀಸ್ ಸರ್ಕ್ಯೂಲರ್ ಇದೆ. ಸ್ಥಾನ ಪಲ್ಲಟ ಮಾಡಕೂಡದು, ಲೋಕಲ್‌ನವರು ಎಲ್ಲರಿಗೂ ನೀವು ಅಷ್ಟು ಅಂಗನವಾಡಿ

ಕೇಂದ್ರಗಳಿಗೆ ನೋಟಿಫಿಕೇಷನ್ ಇಶ್ಯೂ ಮಾಡಿ ಎಂದು ಹೇಳಿದ್ದೀರಿ, ಸಾರ್. ಅದಕ್ಕೊಂದು ಏನಾದರೂ ನಮಗೆ ಮಾರ್ಗದರ್ಶನ ಮಾಡಿ. ಅದರಲ್ಲಿ physical handicapಗೆ ಕೊಡಿ ಎನ್ನುತ್ತೀರಿ, widowಗೆ ಕೊಡಿ ಎನ್ನುತ್ತೀರಿ. ಅವರಿಗೂ SSLC ಆಗಿರಬೇಕೇ, ಬೇಡವೇ? ಅವರಿಗೆ ಏನಾದರೂ ಆದ್ಯತೆ ಕೊಡಬೇಕೆಂದರೆ ಯಾವ ರೀತಿಯಲ್ಲಿ ಕೊಡಬೇಕು ಎಂದು ಹೇಳಬೇಕು. ಮೂರನೆಯದಾಗಿ, ತಾವು ಮೆರಿಟ್ ಮೇಲೆ ಮಾಡಿ ಎಂದರೆ ದಯಮಾಡಿ ಈ ಕ್ಷಣದಿಂದ ಆ ಕಮಿಟಿಯನ್ನು ನೀವು ರದ್ದು ಮಾಡಬೇಕು. ನಾವು scrutinize ಮಾಡಲಿಕ್ಕೆ ಕುಳಿತುಕೊಳ್ಳೋಣವೇ? ಶಾಸಕರುಗಳು ಕಮಿಟಿಯಲ್ಲಿ ಮಾರ್ಕ್ಸ್ ಕಾರ್ಡ್ ನೋಡುವುದಕ್ಕೆ ಕುಳಿತುಕೊಳ್ಳೋಣವೇ? ಶಾಸಕರುಗಳು ಕಮಿಟಿಯಲ್ಲಿ ಮಾರ್ಕ್ಸ್ ಕಾರ್ಡ್ ನೋಡುವುದಕ್ಕೆ ಅವರು ಮೆರಿಟ್ ಯಾರದ್ದು ಜಾಸ್ತಿ ಇದೆ ಎಂದು ನೋಡುವುದಕ್ಕೆ ಕುಳಿತುಕೊಳ್ಳತಕ್ಕ ಅಗತ್ಯ ಇಲ್ಲ. ನಾನು ನಿಜವಾಗಿ positive ಸಲಹೆ ಕೊಟ್ಟೆ. ಎಲ್ಲಾ ಗ್ರಾಮಸ್ಥರು ಊರಿನವರಿಗೇ ಕೆಲಸ ಕೊಡಿ ಎಂದ ಮೇಲೆ ಗ್ರಾಮಸಭೆಯಲ್ಲಿ ಮಾಡಿ ಕೊಟ್ಟುಬಿಡಿ ಸಾರ್. ಅರ್ಹಎ ಮೇಲೆ ಅಂದರೆ ಗ್ರಾಮಗಳಲ್ಲಿ ಕುಳ್ಳಿರಿಸಿಕೊಂಡು ಬಿಡಿ. ಗ್ರಾಮಸ್ಥರನ್ನು ಕೇಳಿ, ನೋಡಪ್ಪ, ನಿಮ್ಮ ಊರಿನಲ್ಲಿ ಇಂತಹದಲ್ಲಿ ಯಾರಿಗೆ ಕೆಲಸ ಕೊಡಬೇಕು ಎಂದು ಗ್ರಾಮಸಭೆಯವರಿಗೇ ಕೊಟ್ಟುಬಿಡಿ. ನಮ್ಮ ತಲೆನೋವು ಕಡಿಮೆ ಮಾಡಿ, ಭಾರ ಕಡಿಮೆ ಮಾಡಿ ಎಂದು ನಾನು ತಮ್ಮಲ್ಲಿ ಬಿನ್ನಹ ಮಾಡುತ್ತಿದ್ದೇನೆ. ಸೆಲೆಕ್ಷನ್ ಮಾಡಬೇಕೆಂದರೆ, ನಮ್ಮನ್ನು ನೀವು ಮೆಂಬರ್ ಆಗಿ ಹಾಕಿದರೆ, ನಾವು ಯಾರೂ ಹೋಗುವುದಕ್ಕೆ ರಾಜಿ ಇಲ್ಲ. ಅದು ನಮಗೆ ಬೇಕಾಗಿಲ್ಲ. ನಾವು ಹೋಗಿ ಕುಳಿತುಕೊಂಡು ಮಾರ್ಕ್ಸ್ ಕಾರ್ಡ್ ನೋಡುವ ಸ್ಥಿತಿಗೆ ಜನ ನಮ್ಮನ್ನು ಇಲ್ಲಿಗೆ ಕಳುಹಿಸಿಲ್ಲ. ನಿಮ್ಮ ಹತ್ತಿರ ಸಂಬಳ ತೆಗೆದುಕೊಂಡ ಕುಳಿತಿರುವ ಅಧಿಕಾರಿಗಳು ಅದನ್ನೆಲ್ಲಾ ನೋಡಿಕೊಳ್ಳುತ್ತಾರೆ. CDPO ಇರುತ್ತಾರೆ. Deputy Director ಇರುತ್ತಾರೆ, Chief Executive Officer ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ, ಅವರ ಕೆಳಗೆ ಕುಳಿತುಕೊಂಡು ರಿಕ್ರೂಟ್‌ಮೆಂಟ್ ಮಾಡುವ ಅಗತ್ಯವನ್ನು ಶಾಸಕರಿಗೆ ತರಬೇಡಿ. ಆಯ್ಕೆ ಮಾಡುವುದಕ್ಕೇನಾದರೂ ಅವಕಾಶ ಇದ್ದರೆ ಮಾತ್ರ ನಮಗೆ ಕೊಡಿ. ಲಿಸ್ಟ್ ಮಾಡಿಕೊಂಡು ಮೆರಿಟ್ ಮೇಲೆ ಕೊಟ್ಟುಬಿಡಿ. ಕಮಿಟಿಯಲ್ಲಿ ನಾವು ಇರಬೇಕೆಂದು ನೀವು ಏಕೆ ಬಯಸುತ್ತೀರಿ? ಕೋತಿ ಮೊಸರು ತಿಂದು ಮೇಕೆ ಬಾಯಿಗೆ ಒರೆಸಿದಂತಾಗುತ್ತದೆ ಸಾರ್ ಇದು. ತಾವು ಇದಕ್ಕೆ ಕ್ಲಾರಿಫೈ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಮಾಧುಸ್ವಾಮಿಯವರು ಮತ್ತು ಅನೇಕ ಹಿರಿಯ ಸದಸ್ಯರೆಲ್ಲಾ ಸದಸ್ಯರಾಗಿ ಆ ಸಮಿತಿಯಲ್ಲಿ ಕೆಲಸ ಮಾಡತಕ್ಕಂಥ ಅಗತ್ಯ ಇಲ್ಲ ಎನ್ನತಕ್ಕದ್ದರ ಬಗ್ಗೆ ಹೇಳಿದ್ದಾರೆ. ಅವರ ಇಡೀ ವಾದವನ್ನು ನಾವು ಮಾನಸಿಕವಾಗಿ ಒಪ್ಪಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಅಧಿಕಾರಿಗಳ ಒಂದು ಸಭೆಯನ್ನು ಕರೆದು, ನಿಮ್ಮ ಭಾವನೆಗಳೆಲ್ಲವನ್ನೂ ಕೂಡ ಪರಿಗಣಿಸಿ, ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುತ್ತಾರೆ. ಅದಕ್ಕೆ ಕೇಂದ್ರ ಸರ್ಕಾರದ ಸುತ್ತೋಲೆಯಲ್ಲಿ ಯಾವುದೇ ನಿಷಿದ್ಧತೆ ಇಲ್ಲ ಎಂದರೆ ಅದರ ಬಗ್ಗೆ ಅವರು ಮಾಡುತ್ತಾರೆ, ಖಂಡಿತವಾಗಿ ಮಾಡುತ್ತಾರೆ. ನಾನು ಇದನ್ನು ಒಪ್ಪುತ್ತೇನೆ. ಯಾರೇ ಒಬ್ಬ ಸದಸ್ಯರಾಗಿರತಕ್ಕವರು ಅರ್ಹತೆ ಆಧಾರದ ಮೇಲೆ ಮಾಡಬೇಕಾದಾಗ, ಈ ಸಮಿತಿಗಳು ಅಗತ್ಯ ಇರುವುದಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಗ್ರಾಮಸಭೆಗೆ ಇದನ್ನು ವಹಿಸಬೇಕು ಎನ್ನುವುದಕ್ಕೆ ಅನೇಕ ಶಾಸಕರು ಒಪ್ಪಿಕೊಳ್ಳುವುದಾಗಿದ್ದರೆ ಅದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ ಅಂದರೆ ಗ್ರಾಮಸಭೆಗೆ ಅದನ್ನು ಕೊಡಬಹುದು. ಮಾನ್ಯ ವಾಟಾಳ್ ನಾಗರಾಜ್‌ರವರನ್ನು ತಾವು ದಯವಿಟ್ಟು ಒಪ್ಪಿಸಿ. ಅವರನ್ನು ತಾವು ಒಪ್ಪಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೆ ಇದನ್ನು ಗ್ರಾಮಸಭೆಗಳಿಗೆ ಕೊಡುವುದಕ್ಕೆ ಒಪ್ಪಿಗೆ ಇದೆ. ಅವರಿಗೇ ಇದನ್ನು ಕೊಟ್ಟುಬಿಡಿ.

ಶ್ರೀ ಹೆಚ್. ಆಂಜನೇಯ: ಗ್ರಾಮಸಭೆಗೆ ಕೊಡುವುದಾದರೆ ಮೆರಿಟ್ ಅಥವಾ ಇನ್ನಾವುದೂ ಬರುವುದಿಲ್ಲ. ಮೆರಿಟ್ ಎನ್ನುವುದು ಆಗ ಹೋಗಿ ಬಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್: ಬಹ ಬುದ್ಧಿವಂತಿಕೆಯಿಂದ ನೀವು ಇಲ್ಲೇ ವ್ಯಾಜ್ಯ ತಂದಿಡುತ್ತಿದ್ದೀರಿ, ನಾನು ನೋಡಿದೆ; ಗ್ರಾಮಸಭೆ ಎಂದರೆ, ವ್ಯಾಜ್ಯ ಶುರುವಾಗುತ್ತದೆ, ಗದ್ದಲವಾಗುತ್ತದೆ, ಅದಕ್ಕೆ ನೀವು ನೇರವಾಗಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್(ಮಾನ್ಯ ಸಚಿವರು): ಅದಕ್ಕಾಗಿ ನಾನು ಹೇಳಿದ್ದು, ತೀರಾ ಲಂಬಿಸಿದರೆ ಇದು ಸರಿಹೋಗುವುದಿಲ್ಲ, ನಾಳೆ ನಾಡಿದ್ದು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕುಳಿತು ಈ ಬಗ್ಗೆ ತೀರ್ಮಾನ ಮಾಡುತ್ತಾರೆ, ನಿಮ್ಮ ಇಡೀ ಅಭಿಪ್ರಾಯವನ್ನು ನಾವು ಒಪ್ಪಿದ್ದೇವೆ. ಗ್ರಾಮಸಭೆಯಲ್ಲಾದರೆ ಮೆರಿಟ್ ಹೋಗುತ್ತದೆಂದು ಹೇಳುತ್ತಿರಲ್ಲಾ ಆದಲ್ಲ, ಮೆರಿಟ್ ಆಧಾರದ ಮೇಲೆ ಅದೇ ರೀತಿಯಾಗಿ ಮೀಸಲಾತಿ ಆಧಾರದ ಮೇಲೆ,

ಎಲ್ಲವೂ ಸಮಾನವಾಗಿದ್ದಾಗ ಆಯ್ಕೆ ಗ್ರಾಮಸಭೆಗೆ ಹೋಗುತ್ತದೆ, If all other things are equal, from out of that group you should select in accordance with the roster system. ಅದಕ್ಕಾಗಿ, ನಾವು ಅದನ್ನು ಬಿಡಿಸಿ ಹೇಳಬೇಕಾದ್ದೇನೂ ಇಲ್. ತಾವು ಹೇಳಿದಂತೆ ಅಧ್ಯಕ್ಷರು ಮಾಡಬೇಕೆನ್ನುವುದಕ್ಕೆ ನಾವು ಒಪ್ಪಿದ್ದೇವೆ, ಮಾನ್ಯ ಉಪ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ ಪ್ರಸ್ತಾಪ ಮಾಡಿರುವುದರಿಂದ, ಅವರು ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್, ಆ ಸರ್ಕ್ಯುಲರ್ ತರಿಸಿ ಓದಿ, ಮೆರಿಟ್ ಮೇಲೆ ಕೊಡಬೇಕು, ಹೆಣ್ಣು ಮಗಳು ಚುರುಕಾಗಿರಬೇಕು, ಆಕ್ಟೀವ್ ಆಗಿರಬೇಕು, ಇದನ್ನೆಲ್ಲಾ ನೋಡಿ ನಾವು ಹೇಗೆ ಸೆಲೆಕ್ಟ್ ಮಾಡೋಣ, ಹೆಣ್ಣು ನೋಡುವುದಕ್ಕೆ ಹೋಗುತ್ತಿದ್ದೇವೆಯೆ, ನಡೆಯಮ್ಮ ಕಾಲ ನೋಡುತ್ತೇವೆ, ನಗಮ್ಮ ಹಲ್ಲು ನೋಡುತ್ತೇವೆ ಎಂದು ಸಂದರ್ಶನದಲ್ಲಿ ಕುಳಿತು ಹೇಳುವುದಕ್ಕಾಗುತದೆಯೇ? Such circulars are given by the government department. ತಾವು ಸರ್ಕ್ಯುಲರ್ ಅನ್ನು ಓದಿ, ಹೆಣ್ಣು ಮಗಳು ಚುರುಕಾಗಿರಬೇಕೆಂದು ಹೇಳಲಾಗಿದೆ, ಅಂದವಾಗಿರಬೇಕೆಂದು ಹೇಳಿಲ್ಲ ಪುಣ್ಯಕ್ಕೆ ನಾನು ನೋಡಿದೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಬುದ್ಧಿವಂತಿಕೆಯುಳ್ಳ ಎಂದು ಸರ್ಕ್ಯುಲರ್‌ನಲ್ಲಿ ಹಾಕಿದ್ದೀರಿ, ಹಾಗೆಂದರೇನು? ಯಾವ ರೀತಿ? ಮಾನ್ಯ ಯಡಿಯೂರಪ್ಪನವರೆ, ಯಾವ ರೀತಿ ಎಂಬುದನ್ನು ತಾವು ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ಚುರುಕಾಗಿರಬೇಕೆಂದು ಹೇಳುತ್ತೀರಿ, ಇನ್ನೊಂದು ಕಡೆ ಅಂಗವಿಕಲರಿಗೆ ಆದ್ಯತೆ ಕೊಡಿ ಎಂದು ಹೇಳುತ್ತೀರಿ.

ಅಧ್ಯಕ್ಷರು: ಈ ರೀತಿಯಾದರೆ ಗೊಂದಲಾಗುತ್ತದೆ, ಏನಾಗುತ್ತದೆಂದರೆ, ಇದಕ್ಕೆ ಆದಿಯು ಇಲ್ಲ ಅಂತ್ಯವು ಇಲ್ಲದಂತಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಸರ್, ನಾನು ಹೇಳುತ್ತೇನೆ ಕೇಳಿ, ತಾವು ಹೇಳಿದ್ದೆಲ್ಲಾ ನನಗೆ ಅರ್ಥವಾಗುತ್ತದೆ, ಬಹಳ ಸಲ ವಿವರಿಸಿದ್ದೀರಿ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಂಗವಿಕಲರಿಗೆ ಆದ್ಯತೆ ಕೊಡಿ ಎಂದು ಹೇಳುತ್ತೀರಿ, ಹೇಗೆ ಸಾಧ್ಯ ಹೇಳಿ ಸರ್?

ಶ್ರೀ ವಾಟಾಳ್ ನಾಗರಾಜ್: ಸಂದರ್ಶನಕ್ಕೆ ಕರೆದಾಗ ಚಟುವಟಿಕೆಯುಳ್ಳ ಎಂದು ಹೇಳಿದ್ದೀರಿ, ಅದು ಹೇಗೆ? ಚಟುವಟಿಕೆ ಎಂದರೆ ಕುಣಿಯಬೇಕಾ? ತಾವು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್: ಇದೆಲ್ಲಾ ರಿಲೆಟಿವ್ ಟರ್ಮಿನಾಲಜಿ, ನಮ್ಮ ಯಾವುದೇ ಕಾನೂನಿನಲ್ಲಿ ಬರೆಯಬೇಕಾದರೆ reasonable apprehension ಎನ್ನುತ್ತೇವೆ, ರೀಸನೆಬಲ್ ಎಂದರೇನು? ಈ ತರಹದ್ದಲ್ಲ;ನಾವು, ಚಟುವಟಿಕೆಯುಳ್ಳವಾಗಿರತಕ್ಕಂಥವರು, ಜೀವನ ಉತ್ಸಾಹವಿರಕ್ಕಂಥವರು, ಅವರಿಗೆ ಕೆಲಸ ಮಾಡಬೇಕಾದಂಥದ್ದು ಇರಬೇಕೆಂದು ಹೇಳುತ್ತೇವೆ. ಆ ಸ್ಟ್ಯಾಂಡರ್ಡ್ ಅನ್ನು ನೋಡಿಕೊಂಡೇ ನೀವು ಮಾಡಿ ಎಂದು ಹೇಳಿದಾಗ, ಅವರು ಕುಣಿಯುವವರಾಗಿರಬೇಕೇ, ಅಂದವಾಗಿರಬೇಕೇ ಎಂದೆಲ್ಲಾ ಕೇಳುತ್ತೀರಿ, ಅಂದವಾಗಿರಬೇಕೆಂದೇನೂ ಬಯಸುತ್ತಿಲ್ಲ. ಅಂದವೇಂದರೆ ಅಪಿಯರೆನ್ಸ್ ಅಲ್ಲ, The beauty lies in the eyes of the beholder. ಎಂದು ಹೇಳುತ್ತಾರೆ. ಶೇಕ್ಸಫಿಯರ್ ಆದ್ದರಿಂದ ಅಂದ ಎನ್ನುವುದು ಮಾನಸವಾಗಿರತಕ್ಕಂಥ, ದೈಹಿಕವಾಗಿರತಕ್ಕಂಥ ಚಟುವಟಿಕೆಯಿಂದ ಬರತಕ್ಕಂಥದ್ದು ಅದು....

ಶ್ರೀ ಜೆ.ಸಿ. ಮಾಧುಸ್ವಾಮಿ: ಇನ್ನು ಮುಂದೆ ಎಸ್ಎಸ್ಎಲ್ಸಿ ಅಂಕಪಟ್ಟಿಯ ಮೇಲೆ ಹೆಣ್ಣುಮಕ್ಕಳ ಫೋಟೋ ಹಾಕಿಸಿಬಿಡಿ, ಎಸ್ಎಸ್ಎಲ್ಸಿ ಮೆರಿಟ್ ಕೊಟ್ಟರೆ ನಾವು ಇಲ್ಲಿ ಸೆಲೆಕ್ಟ್ ಮಾಡಬಹುದಲ್ಲಾ, ಅಂದವಾಗಿರುವವರಿಗೆ, ಚುರುಕಾಗಿರುವವರಿಗೆ ಮೆರಿಟ್ ಕೊಡಬೇಕಲ್ಲಾ ಸರ್.

ಶ್ರೀ ಎಂ.ಪಿ. ಪ್ರಕಾಶ್: ಈ ಗೊಂದಲವನ್ನು ತೆಗೆದುಹಾಕುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ನಾಳೆ ನಾಡಿದ್ದರಲ್ಲಿ ಕುಳಿತುಕೊಂಡು, ನಿಮ್ಮ ಆಸೆ ಏನಿದೆ ಅದನ್ನು ನೆರವೇರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ, ಡೊಂಟ್ ವರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಯಡಿಯೂರಪ್ಪನವರೆ, ಅಲ್ಲಿಯವರೆಗೆ ತಡೆಹಿಡಿಯಿರಿ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಮಾಧುಸ್ವಾಮಿಯವರೆ, ಮತ್ತೆ ಮತ್ತೆ ಅದನ್ನೆ ಹೇಳಿದರೆ ಹೇಗೆ? ಅವರು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಪರಿಶೀಲನೆ ಮಾಡುತ್ತಾರೆಂದು ವಿವರವನ್ನು ಕೊಟ್ಟಿದ್ದಾರೆ ಈಗ ಅವರು ಹೇಳಿ ಆದಮೇಲೆ ಮತ್ತೆ ಅದನ್ನೇ ಕೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಆಯ್ಕೆ ನಿಲ್ಲಿಸಿ ಸ್ವಾಮಿ?

ಶ್ರೀ ಜೆ.ಸಿ. ಮಾಧುಸ್ವಾಮಿ: 30ನೇ ತಾರೀಖು ಆಯ್ಕೆ ಮಾಡುತ್ತಾರೆ, ನಾವು ಮಾತನಾಡುತ್ತಾರೆಂದರೆ ಹೇಗೆ?

ಅಧ್ಯಕ್ಷರು: ನಾಳೆ ನಾಡಿದ್ದರಲ್ಲಿ ಅವರು ಕುಳಿತು ಒಂದು ಖಚಿತವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಎರಡರಲ್ಲಿ ಒಂದು, ಈ ಆಯ್ಕೆಯನ್ನು ಬಹಳ ಪ್ರಮುಖವಾಗಿ ನಿಲ್ಲಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಆ ರೀತಿ ಮಾಡುವುದಾದರೆ ಆಯ್ಕೆಯನ್ನು ಸ್ಥಗಿತ ಮಾಡಿ;

(ಗೊಂದಲ)

ಮಾನ್ಯ ಸದಸ್ಯರೊಬ್ಬರು: ದಯಮಾಡಿ ಇದನ್ನು ತಡೆಹಿಡಿಯಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಾವು ಏನಾದರೂ ಮಾಡಿ ನಮ್ಮ ಮೂರು ಜನ ಹಿರಿಯ ಸದಸ್ಯರ ಜಾಗವನ್ನು ಬದಲಾವಣೆ ಮಾಡಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್: ಬಹಳ ಸಂತೋಷ ಹೇಳಿದ್ದನ್ನು ಸ್ವಾಗತ ಮಾಡುತ್ತೇವೆ, ಅಲ್ಲಿ ಮೂರು ಸೀಟ್‌ಗಳನ್ನು ಖಾಲಿ ಮಾಡಿ ನಾವು ಮೂವರು ಅಲ್ಲಿಗೆ ಬರುತ್ತೇವೆ; ಅಲ್ಲೂ ಒಟ್ಟಿಗೆ ಬರುತ್ತೇವೆ ; ತಾವು ಹೇಳಿಬಿಡಿ ಈ ಕ್ಷಣ ಅಲ್ಲಿಗೆ ಬರುತ್ತೇವೆ ; ಈಗಲೇ ಬರುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಬರುವುದಿಲ್ಲ ಅಲ್ಲಿಗೆ ;

ಶ್ರೀ ವಾಟಾಳ್ ನಾಗರಾಜ್: ವಾಟಾಳ್ ನಾಗರಾಜ್‌ರವರನ್ನು ಆ ಮೂಲೆಗೆ ಹಾಕಿ, ಮಾಧುಸ್ವಾಮಿ ಅವರನ್ನು ಈ ಮೂಲಗೆ ಹಾಕಿ ನನಗೇನೂ ತೊಂದರೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್, ತಕ್ಷಣ ಅಧಿಕಾರಿಗಳಿಗೆ ಸೂಚನೆ ಕಳುಹಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ ಮಾನ್ಯ ವಾಟಾಳ್, ಮಾಧುಸ್ವಾಮಿಯವರನ್ನು ಅಲ್ಲಿ ಮುಂದುಗಡೆ ಹಾಕಿ, ನಮಗೆ ಅಲ್ಲಿ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈಗೇನು ಗಂಭೀರವಾದ ವಿಷಯ ಚರ್ಚೆಯಾಗಿದೆ, ಆ ಬಗ್ಗೆ ನಮ್ಮ ಹಿರಿಯ ಸಚಿವರಾದ ಎಂ.ಪಿ.ಪ್ರಕಾಶ್ ರವರು ಉತ್ತರವನ್ನು ಕೊಟ್ಟಿದ್ದಾರೆ, ತಾತ್ಕಾಲಿಕವಾಗಿ ಎರಡು ಮೂರು ದಿವಸ ತಡೆಯಾಜ್ಞೆ ನೀಡಿ ಆಯ್ಕೆ ಮಾಡಬಾರದೆಂದು ಸೂಚನೆಯನ್ನು ಕೊಡುತ್ತೇವೆ, ನಿಮ್ಮನ್ನು ಕರೆದು ಸಮಾಲೋಚನೆ ಮಾಡಿ ಮುಖ್ಯಮಂತ್ರಿ ನಾವೆಲ್ಲಾ ನಿಮ್ಮ ಸಲಹೆಯನ್ನು ತೆಗೆದುಕೊಂಡು, ತಾವು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಹೇಳಿದ್ದೀರಿ ಅದನ್ನು ಮಾಡೋಣ; ತಾವು ಹೇಳಿದ ಸಲಹೆಯನ್ನು ತೆಗೆದುಕೊಳ್ಳಬಾರದೆಂದೇನೂ ಇಲ್ಲ;

ತಕ್ಷಣ ಎರಡು ಮೂರು ದಿವಸಗಳ ತಡೆಯಾಜ್ಞೆಯನ್ನು ಕೊಟ್ಟು ನಿಮ್ಮ ಜೊತೆ ಸಮಾಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಉಳಿದಿದ್ದನ್ನು ಆಯ್ಕೆ ಮಾಡುವುದನ್ನು ಮುಂದಕ್ಕೆ ಹಾಕುತ್ತೇವೆ.

ಅಧ್ಯಕ್ಷರು: ಕೆ.ಎಂ. ಕೃಷ್ಣಮೂರ್ತಿಯವರೆ, ನಿಮ್ಮದೂ ಕೂಡ ಸಿಮಿಲರ್ ಇದೆ, ಉತ್ತರವನ್ನು ಕೊಟ್ಟಿದ್ದಾರೆ, ನಿಮ್ಮದು ಇನ್ನೇನಾದರೂ ಬೇರೆ ಇದೆಯಾ?

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಈಗ ಆಯ್ಕೆ ಯಾವ ರೀತಿಯಾಗಿ ಮಾಡುವುದೆಂಬುದರ ಬಗ್ಗೆ ಪ್ರಸ್ತಾಪವಾಗಿದೆ. ಇಲ್ಲಿ ನಮ್ಮ ಪ್ರಶ್ನೆ ಏನೆಂದರೆ ಆಯಾ ಕ್ಷೇತ್ರದಲ್ಲಿ ಶಾಸಕರನ್ನು ಏಕೆ ಛೇರ್ಮನ್ ಮಾಡಬಾರದಾಗಿತ್ತು? ಅದಕ್ಕೆ ಮಾನ್ಯ ಯಡಿಯೂರಪ್ಪನವರು ಭರವಸೆಯನ್ನು ಕೊಡಬೇಕಾಗಿತ್ತು. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ, ನಾನು ಹೇಳಿರುವುದಕ್ಕೆ ಸರಿಯಾದ ಉತ್ತರವಿಲ್ಲ, ನಾನು ಕೇಳಿರುವುದು ನಿಯಮಾವಳಿ ಏನೆಂದು? ಆ ನಿಯಮಾವಳಿಗಳನ್ನು ಅಧಿಕಾರಿಗಳಿಗೆ ಹೇಳಿ ಈಗ ಸರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ, ನಿಯಮಾವಳಿಗಳನ್ನು ಮಾಡಬೇಕಾದರೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯಾಗಬೇಕು.

ಅಧ್ಯಕ್ಷರು: ನಾಳೆ ನಾಡಿದ್ದು ಕುಳಿತುಕೊಂಡು ಎಲ್ಲರೊಡನೆ ಸಮಾಲೋಚನೆ ಮಾಡಿ, ನಮ್ಮದು ಮಾನಸಿಕವಾಗಿ ಅದೇ ಇದೆ ಎಂದು ಸ್ಪಷ್ಟವಾಗಿ ಮುಗುಂ ಆಗಿ ಹೇಳಿದ್ದಾರಲ್ಲಾ, ಮತ್ತೇಕೆ ಗಲಾಟೆ ಮಾಡಿಕೊಳ್ಳುತ್ತೀರಿ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಒಪ್ಪಿಗೆ ಆಯಿತು, ಅದನ್ನು ಎಷ್ಟು ದಿವಸದಲ್ಲಿ ಮಾಡುತ್ತಾರೆಂಬುದಾಗಬೇಕು, ಈಗ ಅಲ್ಲೇನಾದರೂ ಆಯ್ಕೆ ನಡೆದರೆ ನಮಗೆ ಬಹಳ ಅನ್ಯಾಯವಾಗುತ್ತದೆ.

(ಇ) ವಿಷಯ: ಸವಣೂರು–ಶಿರೇವಾಡ ರಸ್ತೆ ದುರಸ್ತಿ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಎಸ್. : ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ನಮ್ಮ ಕ್ಷೇತ್ರದಲ್ಲಿ ಸವಣೂರು–ಶಿರೇವಾಡ ರಸ್ತೆ ಬಹಳ ಹದಗೆಟ್ಟಿರುವುದರಿಂದ, 17 ಕಿಲೋ ಮೀಟರ್ ಈ ರಸ್ತೆ ಎರಡು ಜಿಲ್ಲೆಯನ್ನು ಸಂಪರ್ಕಿಸುವಂತಹ ರಸ್ತೆಯಾಗಿದೆ. ಬಹಳ ವರ್ಷಗಳಿಂದ ನಾವು ಈ ಸದನದಲ್ಲಿ ಒತ್ತಾಯ ಮಾಡುತ್ತಾ ಬಂದಿದ್ದೇವೆ, ಸವಣೂರು–ಶಿರೇವಾಡ ರಸ್ತೆ 15 ಹಳ್ಳಿಗಳನ್ನು ದಾಟಿ ಇವತ್ತು ಎರಡು ಜಿಲ್ಲೆಗಳನ್ನು ಲಿಂಕ್ ಮಾಡತಕ್ಕಂಥ ರಸ್ತೆಯಾಗಿದೆ. ಇವತ್ತು ಮಳೆಯಾಗಿ ಸಂಪೂರ್ಣವಾಗಿ ರಸ್ತೆ ಕಟ್ಟು ಹೋಗಿದೆ, ಈಗಾಗಲೇ ಹಾವೇರಿಗೆ ಬರತಕ್ಕಂಥ ಕೆಲವೊಂದು ರಸ್ತೆಯನ್ನು ಸರ್ಕಾರ ರಿಪೇರಿ ಮಾಡಿದರೆ ಧಾರವಾಡ